# ಇಸ್ರಾಯೇಲ್ ರಾಜ್ಯ ಮತ್ತು ಯೊರ್ದನ್ ಹೊಳೆ

ಕರ್ತನಲ್ಲಿ ಪ್ರೀತಿಯ ಸಹೋದರ ಸಹೋದರಿಯರೆ ಈ ಪಾಠದಲ್ಲಿ ನಾವು ಮುಖ್ಯವಾಗಿ ದೇವರು ಆದುಕೊಂಡ ಜನಾಂಗಕ್ಕೆ ಆಶೀರ್ವದಿಸಿ ಕೊಟ್ಟಂತಹ ರಾಜ್ಯ ಅಂದರೆ ಇಸ್ರಾಯೇಲ್ ರಾಜ್ಯದ ಕುರಿತಾಗಿ ತಿಳಿದುಕೊಳ್ಳುತ್ತೇವೆ ಮತ್ತು ಆ ರಾಜ್ಯದಲ್ಲಿ ಇರುವ ಯೊರ್ದನ್ ನದಿ ಹಾಗೂ ನದಿಯಲ್ಲಿ ದೇವರು ನಮಗೆ ಇಟ್ಟಿರುವಂತಹ ಪಾಠವನ್ನು ತಿಳಿದುಕೊಳ್ಳೋಣ, ಸತ್ಯವೇದದಲ್ಲಿ ನಾವು ಅನೇಕ ರಾಜ್ಯಗಳ ಕುರಿತಾಗಿ ಓದಿದ್ದೇವೆ. ನಮ್ಮ ಹಿಂದಿನ ಪಾಠದಲ್ಲಿ ಪ್ರಪಂಚದಲ್ಲಿದ್ದ ನಾಲ್ಕು ಪ್ರಮುಖ ಸಾಮ್ರಾಜ್ಯದ ಕುರಿತಾಗಿ ತಿಳಿದುಕೊಂಡೆವು. ಅಂತೆಯೇ ಮುಂದೆ ಬರುವಂತಹ ನಿರಂತರವಾಗಿ ಉಳಿಯುವ ಐದನೇ ಸಾಮ್ರಾಜ್ಯದ ಕುರಿತಾಗಿ ದಾನಿಯೇಲನ ಪುಸ್ತಕ 7: 13, 14 ವಚನಗಳಲ್ಲಿ ತಿಳಿದುಕೊಂಡಿದ್ದೇವೆ. ನಾವು ಈ ಪಾಠದಲ್ಲಿ ದೇವರು ಇಸ್ರಾಯೇಲ್ಯರಿಗೆ ನೀಡಿದ ರಾಜ್ಯದ ಬಗ್ಗೆ ತಿಳಿದುಕೊಳ್ಳೋಣ. ನಾವು ಈ ಪಾಠದಲ್ಲಿ ದೇವರು ಇಸ್ರಾಯೇಲ್ಯರಿಗೆ ನೀಡಿದ ರಾಜ್ಯದ ಬಗ್ಗೆ ತಿಳಿದುಕೊಳ್ಳೋಣ. ಲೋಕದಲ್ಲಿ ನಾವು ಎಷ್ಟೋ ದೊಡ್ಡ ಹಾಗೂ ಬಲಿಷ್ಠವಾದ ರಾಜ್ಯಗಳನ್ನು ನೋಡುತ್ತೇವೆ. ಉದಾ: ಅಮೆರಿಕ, ರಷ್ಯ, ಬ್ರಿಟನ್. ಆದರೆ ಸತ್ಯವೇದದಲ್ಲಿ ನಾವು ಅಧಿಕವಾಗಿ ಓದುವಂತಹ ರಾಜ್ಯವೆಂದರೆ ಇಸ್ರಾಯೇಲ್ ರಾಜ್ಯ. ಆಧಿಕಾಂಡದಿಂದ ಪ್ರಕಟನೆಯವರೆಗೆ ನಾವು ಓದುವುದಾದರೆ ಅದರಲ್ಲಿ ಬಿಲಿಷ್ಠ ರಾಜ್ಯವಾದ ಅಮೆರಿಕ ಕುರಿತು ಬರೆದಿಲ್ಲ ಬದಲಿಗೆ ಇಸ್ರಾಯೇಲ್ ದೇಶದ ಬಗ್ಗೆ ಅಧಿಕವಾಗಿ ಓದುತ್ತೇವೆ.

ದೇವರು ತಾನು ಆದುಕೊಂಡು ಜನಾಂಗಕ್ಕೆ ಆಶೀರ್ವಾದಿಸಿ ಕೊಟ್ಟಿರುವಂತಹ ರಾಜ್ಯವನ್ನು ನೋಡಿದರೆ ಅದು ಇತರ ರಾಜ್ಯಗಳಿಗಿಂತ ಬಹಳ ಚಿಕ್ಕ ರಾಜ್ಯ. ಈ ರಾಜ್ಯದ ಸಂಪೂರ್ಣ ವಿಸ್ತಾರ ಕೇವಲ 290 ಮೈಲಿ ಉದ್ದು, 85 ಮೈಲಿ ಅಗಲ.. ನಮ್ಮ ಭಾರತ ದೇಶದಲ್ಲಿರುವ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಕೇರಳ ರಾಜ್ಯದ ಅರ್ಧ ಭಾಗದಷ್ಟಿದೆ. ಆಟ್ ಪ್ಲೇನ್‌ನಲ್ಲಿ ನಾವು ಈ ದೇಶವನ್ನು ಕ್ರಮಿಸುವುದಾದರೆ ಕೇವಲ 2 ನಿಮಿಷದಲ್ಲಿ ಕ್ರಮಿಸಬಹುದು. ಈಗಿರುವಲ್ಲಿ ಸಹೋದರರೆ ನಾವು ಯೋಚಿಸಬೇಕಾಗಿರುವ ಅಂಶವೆಂದರೆ ದೇವರು ತಾನು ಆದುಕೊಂಡ ಇಸ್ರಾಯೇಲ್ಯರಿಗೆ ಯಾಕೆ ಇಂತಹ ಒಂದು ಚಿಕ್ಕ ರಾಜ್ಯವನ್ನು ನೀಡಿದರು? ದೇವರು ಅವರಿಗೆ ದೊಡ್ಡ ರಾಜ್ಯವನ್ನು ಏಕೆ ಕೊಡಲಿಲ್ಲ? ಅನೇಕ ದೊಡ್ಡ ರಾಜ್ಯಕ್ಕೆ ಹೋಲಿಕೆ ಮಾಡಿದರೆ ಪ್ರಪಂಚದ ನಕ್ಷೆಯಲ್ಲಿ ಇಸ್ರಾಯೇಲ್ ರಾಜ್ಯವು ಕೇವಲ ಒಂದು ಗೆರೆಯಾಗಿ ಕಾಣುತ್ತದೆ. ಇದು ಮಾತ್ರವಲ್ಲದೇ, ಈ ರಾಜ್ಯದ ಸುತ್ತ ಇರುವ ದೇಶವೆಂದರೆ ಅರೇಬಿಯಾ ದೇಶ. ಈ ದೇಶಗಳ ನಡುವೆ, ಯುದ್ಧ, ಜಗಳ, ಕಲಹ, ಕಿತ್ತಾಟ ನಡೆಯುತ್ತಲೇ ಇರುತ್ತದೆ. ನಾವು 'ಯರುಸಲೇಮ್' ಪದದ ಅರ್ಥವನ್ನು ನೋಡುವುದಾದರೆ 'ಸಮಧಾನದ ನಗರಿ' ಎಂಬಿದಾಗಿದೆ. ಆದರೆ ಈ ಸಮಧಾನದ ನಗರಿಯಲ್ಲಿ ದೇವರು ಯಾಕೆ ಸಮಧಾನ ನೆಲಸುವಂತೆ ಮಾಡಿಲ್ಲ? ಈಗಿರುವಲ್ಲಿ ದೇವರು ಯಾಕೆ ಇಂತಹ ಕಲಹ ಭೂಮಿಯನ್ನು ಇಸ್ರಾಯೇಲ್ಯರಿಗೆ ನೀಡಿದರು? ದೇವರು ಯಾಕೆ ಅಮೆರಿಕಾವಾಗಲಿ ಗ್ರೇಟ್ ಬ್ರಿಟ್‌ನಂತಹ ದೇಶಗಳನ್ನು ಕೊಡದೆ ವಿಶೇಷವಾಗಿ ಇಂತಹ ಚಿಕ್ಕ ರಾಜ್ಯವನ್ನು ನೀಡಿದರು ಎಂಬೆಲ್ಲ ವಿಷಯದ ಕುರಿತಾಗಿ ನಾವು ಈ ಪಾಠದಲ್ಲಿ ತಿಳಿದುಕೊಳ್ಳೋಣ.

ನಾವು ದೇವರನ್ನು ಅರ್ಥಮಾಡಿಕೊಳ್ಳಲು ಹಲವಾರು ರೀತಿಗಳಿವೆ. ನಾವು ಆತನು ಮಾಡಿರುವ ಸೃಷ್ಟಿ ಕಾರ್ಯಗಳಾದ ಆತನನ್ನು ತಿಳಿದುಕೊಳ್ಳಬಹುದು. ಉದಾ: ಆಕಾಶ, ಬೆಟ್ಟ, ಗುಡ್ಡ, ಸೂರ್ಯ, ಚಂದ್ರ, ನಕ್ಷತ್ರ ಇತ್ಯಾದಿ

ಇವೆಲ್ಲವುಗಳು ನಮಗೆ ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ. ಆಕಾಶ ಮಂಡಲ, ನಕ್ಷತ್ರ ಪುಂಜ ವಿಭಿನ್ನವಾದ ಸಸ್ಯ ಸಂಕುಲಗಳು ಹೀಗೆ ದೇವರ ಸೃಷ್ಟಿಯಲ್ಲಿ ಒಂದೊಂದು ಒಂದೊಂದು ವಿಶಿಷ್ಟತೆಯನ್ನು ಹೊಂದಿದೆ. ಅಂದರೆ ಮರಗಳು, ಗಿಡಗಳು ಅವುಗಳು ಬಿಡುವ ಫಲಗಳು ಅದರದರ ರುಚಿ, ಅವುಗಳ ಫಲಕಾಲ, ಹಾಗೆಯೇ ಅನೇಕ ವಿಧವಾದ ಹೂಗಳು, ಬಣ್ಣಬಣ್ಣದ ಚಿತ್ತಾರಗಳು, ಆಕಾಶದಲ್ಲಿ ಮೂಡಿ ಬರುವ ವೈವಿಧ್ಯಮಯವಾದ ಬಣ್ಣಗಳು ಹೀಗೆ ದೇವರು ಸೃಷ್ಟಿಯಲ್ಲಿ ಅನೇಕ ವಿವಿಧತೆ ವಿಶೇಷತೆಗಳನ್ನು ನಾವು ನೋಡುವಾಗ ದೇವರ ಜ್ಞಾನ, ಮಹಿಮೆ ಎಂತಹದೆಂದು ತಿಳಿದುಕೊಳ್ಳುತ್ತೇವೆ. ಆದರೆ ವಿಪರ್ಯಾಸವೆಂದರೆ ಸೃಷ್ಟಿಯ ಮೂಲಕ ಸೃಷ್ಟಿಕರ್ತನನ್ನು, ದೇವರನ್ನು ತಿಳಿದುಕೊಳ್ಳದೆ ಸೃಷ್ಟಿ ವಸ್ತುಗಳನ್ನು ದೇವರೆಂದು ಪೂಜಿಸುತ್ತಿರುವುದನ್ನು ಅಪೊಸ್ತಲನಾದ ಪೌಲನು (ರೂಮ 1:20–23 ರಲ್ಲಿ ತಿಳಿಸಿದ್ದಾನೆ. ದೇವರು ಮಾಡಿದ ಉಪಕಾರವನ್ನಾಗಲಿ ಆತನ ಕರುಣೆಯನ್ನಾಗಲಿ ನೆನೆಸದೆ ಅವರು ಸೃಷ್ಟಿ ವಸ್ತುಗಳನ್ನು ಪೂಜಿಸಿದರು. ನಾವು ಕೇವಲ ಸೃಷ್ಟಿಯನ್ನು ನೋಡಿಯೇ ದೇವರನ್ನು ಅರ್ಥ ಮಾಡಿಕೊಳ್ಳಬೇಕಾಗಿಲ್ಲ. ಬದಲಿಗೆ ಆತನ ಪ್ರವಾದಿಗಳ ಮುಖಾಂತರ ಬರೆಸಿಕೊಟ್ಟಿರುವ ಸತ್ಯವೇದವನ್ನು ಓದಿ ಅರ್ಥ ಮಾಡಿಕೊಳ್ಳುವುದರ ಮೂಲಕ ದೇವರ ಮಹಿಮೆ, ಬಲ, ಪರಾಕ್ರಮಗಳನ್ನು ತಿಳಿದುಕೊಳ್ಳಬಹುದು.

ಉದಾ:

1. ಕೆಂಪು ಸಮುದ್ರವನ್ನು ಭಾಗವಾಗಿ ಮಾಡಿ ಇಸ್ರಾಯೇಲ್ಯರನ್ನು ಫರೋಹನಿಂದ ರಕ್ಷಿಸಿ ನಡೆಸಿದ್ದು.
2. ಯೆಹೋಶವನ ಮುಂದಾಳತ್ವದಲ್ಲಿ ಯೆರಿಕೋ ಕೋಟೆಯನ್ನು ಮುತ್ತಿಗೆ ಹಾಕಲು ಇಸ್ರಾಯೇಲ್ಯರನ್ನು ಯೆರ್ದನ್ ನದಿ ದಾಟ್ಟಿಸಿದ್ದು.
3. ಯೆರಿಕೋ ಕೋಟೆಯನ್ನು ಯುದ್ಧವಿಲ್ಲದ ವಶಮಾಡಿಕೊಂಡಿದ್ದು.
4. ದಾವೀದನು ಗೊಲ್ಯಥನನ್ನು ಕೊಂದಿದ್ದು
5. ಸಂಸೋನ ಪಿಲಿಷ್ಟಿಯರನ್ನು ಸಂಹರಿಸಿದ್ದು.

ಇದರಂತೆಯೇ ದೇವರು ಅನೇಕ ಪ್ರಾಣಿ, ಪಕ್ಷಿ, ಬೆಟ್ಟ, ಗುಡ್ಡ ನದಿ ಇತ್ಯಾದಿಗಳಲ್ಲಿಯೂ ಸಹ ನಮಗೆ ಪಾಠಗಳನ್ನು ಇಟ್ಟಿದ್ಧಾರೆ. ಉದಾ: ಇರುವೆಯಿಂದಲೂ ಪಾಠ ಕಲಿಯಬಹುದು. ಜ್ಞಾನೋಕ್ತಿ 6:6 ಯೋಬ 39: 13, 14 ರಲ್ಲಿ ಉಷ್ಟ್ರ ಪಕ್ಷಿಯ ಬಗ್ಗೆ, ಯೋಬ 39: 27 ಗರುಡ ಪಕ್ಷಿ ಪ್ರಪಂಚದಲ್ಲಿ ಅತಿ ಎತ್ತರದಲ್ಲಿ ಹಾರಾಡುವ ಪಕ್ಷಿ ಮತ್ತು ಅತಿ ಎತ್ತರದಲ್ಲಿ ಗೂಡನ್ನು ಮಾಡುತ್ತದೆ. ಇದರಂತೆಯೇ, ಪರ್ವತ, ಬೆಟ್ಟ ಗುಡ್ಡಗಳಲ್ಲಿಯೂ ಅನೇಕ ಪಾಠವನ್ನು ಕೊಟ್ಟಿದ್ದಾರೆ. ಇವುಗಳು ರಾಜ್ಯಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಅನೇಕ ಆತ್ಮೀಕ ಅರ್ಥವನ್ನು ಇಟ್ಟಿದ್ದಾರೆ. ಕೀರ್ತನೆ 97:5, ಸರ್ವಭೌಮನಾದ ಯೆಹೋವನ ಎದುರಿನಲ್ಲಿ ಪರ್ವತಗಳು ಮೇಣದಂತೆ ಕರಗಿ ಹೋದವು. ಈ ವಾಕ್ಯದ ಅರ್ಥವೇನೆಂದರೆ ಪರ್ವತಗಳು ಮೇಣದಂತೆ ಕರಗಿ ಹೋಗುತ್ತದೆ ಎಂದಲ್ಲ ಬದಲಿಗೆ ದಾನಿಯೇಲನ ಪುಸ್ತಕದಲ್ಲಿ 2ನೇ ಅಧ್ಯಾಯದಲ್ಲಿ ತಿಳಿಸಿರುವಂತೆ ಪರ್ವತಗಳು ರಾಜ್ಯಗಳನ್ನು ಸೂಚಿಸುತ್ತದೆ. ಎಲ್ಲಾ ಲೋಕದ ರಾಜ್ಯಗಳು ಕ್ರಿಸ್ತನ ಮುಂದೆ ಮೇಣದಂತೆ ಕರಗಿ ಹೋಗುತ್ತದೆ ಎಂಬುದೇ ಇದರ ಅರ್ಥ. ನೀರು: ಸತ್ಯವೇದದಲ್ಲಿ ನೀರು ಏನನ್ನು ಸೂಚಿಸುತ್ತದೆ? ಪ್ರಕಟನೆ 17:15 ಪ್ರಜೆ, ಜನ, ಸಮೂಹ ಭಾಷೆ ಜನಾಂಗ ಮತ್ತೊಂದು ಅರ್ಥವೇನೆಂದರೆ ಯೇಸು ಸ್ವಾಮಿ ಹೇಳಿದಂತೆ ನಾವು ಕೊಡುವ ನೀರನ್ನು ಕುಡಿದವರಿಗೆ

ನೀರಡಿಕೆಯಾಗದು. ಈ ವಾಕ್ಯದಲ್ಲಿ ನೀರು ಸತ್ಯವನ್ನು ಸೂಚಿಸುತ್ತದೆ. ಯೇಸು ಸ್ವಾಮಿಯು ಕೊಡುವ ಸತ್ಯವನ್ನು ಕುಡಿಯುವವರಿಗೆ ಬೇರೆ ಪ್ರಾಪಂಚಿಕ ವಿಚಾರಗಳು ಬೇಕಿಲ್ಲ. ಬದಲಿಗೆ ಸತ್ಯವು ಅವರಲ್ಲಿ ನೆಲಸಿ ಅವರನ್ನು ಸಮೃದ್ಧಿಗೊಳಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

ಮತ್ತೊಂದು ಉದಾಹರಣೆ: ಮರ ಮತ್ತು ಹುಲ್ಲು ಏನನ್ನು ಸೂಚಿಸುತ್ತದೆ?

ಮನುಷ್ಯನ ಆಯಸ್ಸನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ ಹುಲ್ಲನ್ನು ಅಲ್ಪ ಆಯಸ್ಸಿಗೂ ಮರವನ್ನು ದೀರ್ಘ ಆಯಸ್ಸಿಗೂ ಹೋಲಿಸಿ ಹೇಳಲಾಗಿದೆ. ಅಂತೆಯೇ ಕ್ರಿಸ್ತನ ರಾಜ್ಯದಲ್ಲಿ ಮನುಷ್ಯರು ಮರದಂತೆ ದೀರ್ಘ ಆಯಸ್ಸನ್ನು ಅಂದರೇ ನಿತ್ಯ ಜೀವವನ್ನು ಹೊಂದುವರೆಂಬುದನ್ನು ಸೂಚಿಸುತ್ತದೆ. ಮತ್ತೊಂದು ಉದಾಹರಣೆ ಹುಳಿ ಹಿಟ್ಟು; ಯೇಸು ಸ್ವಾಮಿಯು ಹುಳಿ ಹಿಟ್ಟಿನ ವಿಷಯವಾಗಿ ಎಚ್ಚರಿಕೆಯಾಗಿರಿ ಎಂದು ಹೇಳುವಾಗ ಯಾವ ಹಿಟ್ಟಿನ ವಿಷಯವಾಗಿ ಹೇಳಿದರು? ಮತ್ತಾಯ 16:12 ಹೇಳುವಂತೆ ಅದು ಪರಿಸಾಯರ ಮತ್ತು ಸದ್ದುಕಾಯರ ಬೋಧನೆಯನ್ನು ಸೂಚಿಸುತ್ತಾರೆ. ಅದೇ ರೀತಿ ಮೀನು ಹಿಡಿಯುವ ಬೆಸ್ತರನ್ನು ಯೇಸು ಆರಿಸಿಕೊಂಡು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು ಎಂದು ಹೇಳಿದ ಮಾತು ಏನನ್ನು ಸೂಚಿಸುತ್ತಾರೆ. ಅದು ಮನುಷ್ಯರಿಗೆ ಸತ್ಯವನ್ನು ಹೇಗೆ ತಿಳಿಸಬೇಕು ಎಂಬುದನ್ನು ಹೇಳಿಕೊಡುತ್ತಾನೆ ಎಂಬುದನ್ನು ಸೂಚಿಸುತ್ತಾನೆ. ಮತ್ತೊಂದು ಉದಾಹರಣೆ: ಗೋದಿ ಮತ್ತು ಹಣಜಿಯ ಸಾಮ್ಯ, ಗೋಧಿ ಎಂದರೆ ನಿಜವಾದ ಕ್ರೈಸ್ತರು ಮತ್ತು ಹಣಜಿ ಎಂದರೆ ಸುಳ್ಳು ಕ್ರೈಸ್ತರನ್ನು ಸೂಚಿಸುತ್ತಾರೆ. ಇದರಂತೆಯೇ ದೇವರು ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಿಕೊಟ್ಟ ಚಿಕ್ಕ ದೇಶವು ಸಹ ನಮಗೆ ಒಂದು ವಿಶೇಷ ಪಾಠವನ್ನು ತಿಳಿಸಿಕೊಡುತ್ತದೆ. ದೇವರು ವಾಗ್ದಾನ ಮಾಡುವಾಗ ನಾನು ನಿಮಗೆ ಹಾಲು ಜೇನು ಹರಿಯುವ ದೇಶವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಈ ಮಾತನ್ನು ಪದದ ಅರ್ಥದಂತೆ ಅರ್ಥಮಾಡಿಕೊಂಡರೆ ಆ ದೇಶದಲ್ಲಿ ನದಿಗಳ ಬದಲಿಗೆ ಹಾಲು ಜೇನು ಹರಿಯುತ್ತದೆ ಎಂಬ ಅರ್ಥವನ್ನು ಕೊಡುತ್ತದೆ. ಆದರೆ ದೇವರು ಈ ಮಾತನ್ನು ಈ ಅರ್ಥದಲ್ಲಿ ಹೇಳಲಿಲ್ಲ ಬದಲಿಗೆ ಅದು ಸಮೃದ್ಧಿಯಾಗಿರುವ ದೇಶ ಎಂಬ ಅರ್ಥದಲ್ಲಿ ಅದನ್ನು ಹೇಳಿದ್ದಾರೆ. ಇದರಂತೆಯೆ ಆತನು ಇಸ್ರಾಯೇಲ್ಯರಿಗೆ ಚಿಕ್ಕ ದೇಶವನ್ನು ನೀಡುವುದರಲ್ಲಿಯೂ ಒಂದು ಪಾಠವನ್ನು ಇಟ್ಟಿದ್ದರೆ. ಯೆರೆ. 32:20.

ಉದಾ: ಚಿಯೋನ್ ಪರ್ವತ, ಆ ಪರ್ವತದ ಮೇಲೆ ಒಂದು ಪಟ್ಟವಿತ್ತು ಈ ಪಟ್ಟಣದ ಹೆಸರು ಯೆರುಸಲೇಮ್ ಇದರಂತೆಯೇ ಪ್ರಕಟನೆ ಪುಸ್ತಕದಲ್ಲಿ ತಿಳಿಸಿರುವಂತೆ ದೇವರ ರಾಜ್ಯದಲ್ಲಿ ಹೊಸ ಯೆರುಸಲೇಮನ್ನು ಸ್ಥಾಪಿಸುವುದನ್ನು ಸೂಚಿಸಲು ಇಟ್ಟಿದ್ದಾರೆ. ಹೇಗೆ ಇಸ್ರಾಯೇಲ್ ರಾಜ್ಯದ ಸುತ್ತ ಇದ್ದಂತಹ ರಾಜ್ಯಗಳು ಇಸ್ರಾಯೇಲ್ ರಾಜ್ಯದ ಶತೃಗಳಾಗಿದ್ದು ಅದರ ವಿರುದ್ಧ ಇಸ್ರಾಯೇಲ್ಯ ರಜ್ಯವೂ ಹೋರಾಡಬೇಕೂ ಅಂತೆಯೇ ಆತ್ಮೀಕ ಇಸ್ರಾಯೇಲ್ಯರಾದ ನಾವು ನಮ್ಮ ವಿರೋಧಿಗಳಾದ ಸೈತಾನ, ಪ್ರಪಂಚ ಮತ್ತು ಅತಿ ಬಲಿಷ್ಠವಾದ ವೈರಿ ಅಂದರೆ ನಮ್ಮ ಸ್ವಂತ ಶರೀರ ಹಾಗೂ ಅದರ ಅಭಿಲಾಶೆಗಳ ವಿರುದ್ಧ ಸದಾ ಹೋರಾಡಿ ಜಯಿಸಬೇಕು ಎಂಬುದನ್ನು ಸೂಚಿಸುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸುವಾಗ ನಮಗೆ ತಿಳಿಯುವುದೇನೆಂದರೆ ದೇವರು ಯಾವುದೇ ಕಾರ್ಯವನ್ನು ವ್ಯರ್ಥವಾಗಿ ಮಡಿಲ್ಲ ಬದಲಿಗೆ ನಮಗೆ ಬೇಕಾಗಿರುವ ಪಾಠವನ್ನು ತಿಳಿಸಿಕೊಡಲು ಪ್ರತಿಯೊಂದನ್ನು ನಮಗೆ ನಿದರ್ಶನಗಳಾಗಿ ಇಟ್ಟಿದ್ದಾರೆ.

ಅಂತೆಯೇ ಈ ಇಸ್ರಾಯೇಲ್ ದೇಶದಲ್ಲಿ ಹರಿಯುವ ಒಂದು ನದಿಯಲ್ಲಿಯೂ ಸಹ ಒಂದು ಪಾಠವನ್ನು ಇಟ್ಟಿದ್ದಾರೆ. ನಾವು ನೋಡಿರುವಂತೆ ಇಸ್ರಾಯೇಲ್ ದೇಶದಲ್ಲಿರುವ ಪರ್ವತ, ಮರ, ಪ್ರಾಣಿ, ಪಕ್ಷಿಗಳು, ಸತ್ತಲಿರುವ ಶತೃ ರಾಜ್ಯಗಳು, ಹೀಗೆ ದೇವರು ಇಸ್ರಾಯೇಲಿನಲ್ಲಿರುವ ಎಲ್ಲಾ ವಸ್ತು ವಿಷಯಗಳಲ್ಲಿ ನಮಗೆ ಪಾಠಗಳನ್ನು ಇಟ್ಟಿರುವಾಗ ಇಸ್ರಾಯೇಲ್ ದೇಶದಲ್ಲಿರುವ ನದಿಯಲ್ಲಿ ನಮಗೆ ದೇವರು ಇಟ್ಟಿರುವ ಪಾಠವೇನು ಎಂಬುದನ್ನು ನಾವು ತಿಳಿದುಕೊಳ್ಳೋಣ. ಇಸ್ರಾಯೇಲ್ ದೇಶದಲ್ಲಿ ಇರುವುದು ಕೇವಲ ಒಂದು ನದಿ ಈ ನದಿಯ ಹೆಸರೇ ಯೊರ್ದಾನ್ ಈ ನದಿಯ ವಿಶೇಷತೆ ಏನೆಂದರೆ.

- ❖ ಯೇಸು ಸ್ವಾಮಿಯವರು ದೀಕ್ಷ ಸ್ನಾನವನ್ನು ಮಾಡಿಕೊಂಡ ನದಿ.
- ❖ ಕೃಷ್ಟದಿಂದ ಬಳಲಿದ ನಾಮನನ್ನು ಸ್ವಸ್ಥ ಹೊಂದಿದ ನಂದಿ.
- ❖ ಯೆಹೋಶವನ ನಯಕತ್ವದಲ್ಲಿ ಇಸ್ರಾಯೇಲ್ಯರು ಯೆರಿಕೊ ಪಟ್ಟಣವನ್ನು ಆಕ್ರಮಣ ಮಾಡಲು ಬರುವಾಗ ಈ ನದಿಯನ್ನು ದಾಟಿ ಬಂದರು.
- ❖ ಎಲೀಯನು ತನ್ನ ಸೇವಕನಾದ ಎಲೀಷನನ್ನು ಬಿಟ್ಟು ಹೋಗುವಾಗ ಕಂಬಳಿಯಿಂದ ಈ ನದಿಯನ್ನು ಹೊಡೆದನು.
- ❖ ಲೋಟನು ಈ ಸೀಮೆಯನ್ನು ಆರಿಸಿಕೊಂಡನು. ಈ ಜಾಗವೂ ಏದೇನ್ ತೋಟದಂತೆ ಇತ್ತು ಎಂಬುದಾಗಿ ಸತ್ಯವೇದದಲ್ಲಿ ಓದುತ್ತೇವೆ.

ಈಗೆ ಸತ್ಯವೇದದಲ್ಲಿ ತಿಳಿಸಿರುವಂತೆ ಯೋರ್ದನ್ ನದಿಯು ಬಹಳ ವಿಶೇಷವಾಗಿರುವಂತಹ ನದಿ 'ಯೋರ್ದನ್' ಎಂಬ ಪದದ ಅರ್ಥವೇನೆಂದರೆ 'ಡಿಸೆಂಡರ್' ಅಂದರೆ ಇದು ಬಹಳ ಎತ್ತರವಾದ ಸ್ಥಳದಿಂದ ಹರಿದು ಕೆಳಗೆ ಬರುವುದರಿಂದ ಇದಕ್ಕೆ 'ಡಿಸೆಂಡರ್' ಎಂದು ಕರೆಯುತ್ತಾರೆ. ಖಸೆಂಡರ್ ಅಂದರೆ ಕನ್ನಡದಲ್ಲಿ 'ಇಳಿಜಾರು' ಎಂಬ ಅರ್ಥ ಬರುತ್ತದೆ. ಈ ನದಿಯು 9000 ಫೀಟ್ ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿ ಪ್ರಾರಂಭವಾಗಿ ಸುಮಾರು 1,300 ಫೀಟ್ ಸಮುದ್ರ ಮಟ್ಟಕ್ಕಿಂತ ಕೆಳಗೆ ಹರಿದು ಬರುತ್ತದೆ. ಈ ಕಾರಣದಿಂದ ಇದನ್ನು ಡಿಸೆಂಡರ್ – ಇಳಿಜಾರು ಎಂದು ಕರೆಯುತ್ತಾರೆ. ಇದರ ಉಗಮವು ಮೊದಲಿಗೆ ಹೆರ್ಮಾನ್ ಪರ್ವತದಲ್ಲಿ ಪ್ರಾರಂಭವಾಗುತ್ತದೆ. ಈ ಹೆರ್ಮಾನ್ ಪರ್ವತವು ಇಸ್ರಯೇಲಿನ ಉತ್ತರ ಭಾಗದಲ್ಲಿ ಸಮುದ್ರ ಮಟ್ಟಕ್ಕಿಂತ 9,000 ಅಡಿ ಎತ್ತರದಲ್ಲಿದೆ. ಇಲ್ಲಿಯವರೆಗೆ ಪ್ರಪಂಚದ ಇತಿಹಾಸದಲ್ಲಿ ಒಮ್ಮೆಯೂ ಈ ಯೋರ್ದಾನ್ ನದಿಯು ಒಣಗಿದ ಇಲ್ಲವೆ ಬತ್ತಿ ಹೋಗಿರುವುದಾಗಿ ಉಲ್ಲೇಖಗಳು ನಮಗೆ ದೊರೆಯುವುದಿಲ್ಲ. ಈ ನದಿಯು ಸದಾ ಕಾಲವು ನಿರಂತರವಾಗಿ ಹರಿಯುತ್ತದೆ. ಹೆರ್ಮಾನ್ ಪರ್ವತದಲ್ಲಿ ಹಿಮವು ಬೀಳುವುದರಿಂದ ಈ ಹಿಮವು ಕರಗಿ ನಾಲ್ಕು ನದಿಗಳಾಗಿ ಹರಿದು ಲೇಕ್ ಉಲ್ಲಾ (ಉಲ್ಲಾ ಸರೋವರ) ಎಂಬ ಸ್ಥಳವನ್ನು ಸೇರುತ್ತದೆ. ಈ ಸ್ಥಳಕ್ಕೆ ಹರಿದು ಬರುವ ನೀರು ಯಾವ ಕಲ್ಮಶಗಳಿಂದ ಕೂಡಿರದೆ ಬಹಳ ಶುದ್ಧವಾಗಿ ಹರಿದುಬರುತ್ತದೆ. ಇದು ಹಿಮ ಕರಗಿದ ನೀರಾಗಿರುವುದರಿಂದ ಕುಡಿಯಲು ಬಹಳ ತಂಪಾಗಿಯು ಶುಚಿಯಾಗಿಯೂ ಇರುತ್ತದೆ. ಉಲ್ಲಾ ಸರೋವರು ಒಂದು ಸುಂದರವಾದ ಪ್ರವಾಸಿ ತಾಣವಾಗಿದೆ. ಹೀಗೆ ಯೆರ್ಹನ್ ನದಿಯು ಉಲ್ಲಾ ಸರೋವರದಿಂದ

ಮುಂದೆ ವೇಗವಾಗಿ ಹರಿದು ಬರುವಾಗ ಅದು ಅನೇಕ ಅಶುದ್ಧ ಕಲ್ಮಶಗಳಿಂದ ಸೇರಿ ಗಲಿಲಾಯ ಸಮುದ್ರವನ್ನು ಸೇರುತ್ತದೆ. ಈ ಗಲಿಲಾಯ ಸಮುದ್ರವು ಸತ್ಯವೇದದಲ್ಲಿ ಚಿರಪರಿಚಿತವಾದ ನದಿ.

ಗಲಿಲಾಯ ಸಮುದ್ರದ ಭಾಗದಲ್ಲಿಯೇ ಯೇಸು ಸ್ವಾಮಿ ಪ್ರಪ್ರಥಮವಾಗಿ ತನ್ನ ಸುವಾರ್ತಕಾರ್ಯ ಪ್ರಾರಂಭಿಸಿದ್ದು ಈ ನದಿಯ ಬೆಸ್ತರನ್ನು ತನ್ನ ಅ ಪೊಸ್ತಲರನ್ನಾಗಿ ಆರಿಸಿಕೊಂಡಿದ್ದು. ಅಲ್ಲೊಲಕಲ್ಲೋಲವಾಗಿದ್ದ ಈ ನದಿಯನ್ನೇ ಯೇಸು ಸ್ವಾಮಿ ಗದರಿಸಿ ಶಾಂತವಾಗಿಸಿದ್ದು ಮತ್ತು ಯೇಸು, ಪೇತ್ರನು ಸಹ ಈ ನದಿಯ ಮೇಲೆಯೇ ನಡೆದು ಬಂದದ್ದು.

ಈ ನದಿಯು ಲೇಕ್ ಉಲ್ಲಾದಿಂದ ಹೊರಟು ಬಹಳ ರಭಸದಿಂದ ಹರಿಯುತ್ತ ಇಳಿದು ಬಂದು ಒಂದು ಸ್ಥಳದಲ್ಲಿ ಬಂದು ಸೇರುತ್ತದೆ. ಅಲ್ಲಿ ಅದರ ರಭಸ ಕಡಿಮೆಯಾಗುತ್ತದೆ. ಈ ಸ್ಥಳದಲ್ಲಿ ನಿಂತ ನೀರು ಕ್ರಮೇಣವಾಗಿ ಶುದ್ಧವಾಗಲು ಪ್ರಾರಂಭಿಸುತ್ತದೆ ಮುಂದೆ ಈ ಸ್ಥಳದಲ್ಲಿ ಹೊರಟ ನೀರು ವಕ್ರ ವಕ್ರವಾಗಿ ಹರಿದು 60 ಮೈಲಿ ಅರಣ್ಯದಲ್ಲಿ ಹರಿದು ಕೊನೆಗೆ **'ಡೆಡ್ ಸೀ'** ____________ ಗೆ ಬಂದು ಸೇರುತ್ತದೆ. ಈ ಲವಣ ಸಮುದ್ರವು 1,312 ಅಡಿ ಸಮುದ್ರ ಮಟ್ಟದ ಕೆಳಗೆ ಇದೆ. ಇದು ಪ್ರಪಂಚದಲ್ಲೇ ಬಹಳ ತಗ್ಗಾದ ಪ್ರದೇಶದಲ್ಲಿರುವ ಸಮುದ್ರ. ಈ ಸಮುದ್ರಕ್ಕೆ ದಿನಾಲು 6 ಮಿಲಿಯನ್ ಟನ್‌ನಷ್ಟು ನೀರು ಬಂದು ಸೇರಿದರೂ ಸಹ ಇದುವರೆಗೂ ಈ ಸಮುದ್ರ ಉಕ್ಕಿ ಹರಿದಿಲ್ಲ. ಈ ಸಮುದ್ರದಿಂದ ನೀರು ಬೇರೆ ಎಲ್ಲಿಯೂ ಹರಿದು ಹೋಗುವುದಿಲ್ಲ. ಆದಾಗ್ಯೂ ಇಲ್ಲಿ ಯಾವುದೇ ಪ್ರವಾಹವು ಇದುವರೆಗೆ ಆಗಿಲ್ಲ ಮತ್ತುಉ ಈ ಸಮುದ್ರದಲ್ಲಿ 12.65 ಮಿಲಿಯನ್ ಟನ್ ಪ್ರಮಾಣದಷ್ಟು ಉಪ್ಪು ಇದೆ. ಮಾತ್ರವಲ್ಲದೆ ಪ್ರತಿ ವರ್ಷ 85 ಮಿಲಿಯನ್ ಟನ್‌ನಷ್ಟು ಉಪ್ಪು ಬಂದು ಸೇರುತ್ತದೆ. ಈ ಸಮುದ್ರದಲ್ಲಿ ಉಪ್ಪಿನ ಅಂಶ ಅಧಿಕವಾಗಿರುವುದರಿಂದ ಈ ಕಾರಣದಿಂದ ಸಮುದ್ರದ ನೀರಿನ ಮೇಲೆ ಆರಾಮವಾಗಿ ತೇಲಬಹುದು. ಈ ನದಿಯಲ್ಲಿ ಯಾವುದೇ ಜೀವಂತ ಮೀನು ಬಂದರೆ ಉಪ್ಪಿನ ಪ್ರಮಾಣ ಅಧಿಕವಾಗಿರುವುದರಿಂದ ಬದುಕುಳಿಯಲು ಸಾಧ್ಯವಿಲ್ಲ. ಈ ನೀರು ಜಲಚರಗಳಿಗೆ ಯೋಗ್ಯವಾಗಿಲ್ಲ.

ಈ ಯೋರ್ದಾನ್ ನದಿಯಲ್ಲಿ ದೇವರು ನಮಗೆ ಇಟ್ಟಿರುವ ಪಾಠವೇನು? ದೇವರು ನಮಗೆ ಈ ನದಿಯಲ್ಲಿ ಒಂದು ಸುಂದರವಾದ ಪಾಠವನ್ನು ಇಟ್ಟಿದ್ದಾರೆ. ಈ ನದಿಯು ಉನ್ನತವಾದ ಸ್ಥಿತಿಯಿಂದ ಬಹಳ ತಗ್ಗಾದ ಸ್ಥಿತಿಗೆ ತಲುಪುತ್ತದೆ. ಈ ನದಿಯ ಮಾರ್ಗವು ನಮಗೆ ಒಂದು ವಿಶೇಷ ಪಾಠವನ್ನು ಕೊಡುತ್ತದೆ. ಅದೇನೆಂದರೆ ಮನುಷ್ಯನ ಮಾರ್ಗ. ದೇವರು ಅವನನ್ನು ಸೃಷ್ಟಿ ಮಾಡುವಾಗ ಅವನನ್ನು ಉನ್ನತವಾಗಿ ಅಂದರೆ ಪರಿಪೂರ್ಣ ಮಾನವನಾಗಿ ಸೃಷ್ಟಿಸಿದನು. ಆದರೆ ಮಾನವನು ಪಾಪ ಮಾಡಿ ಉನ್ನತ ಸ್ಥಿತಿಯಿಂದ ಹೀನವಾದ ಸ್ಥಿತಿಗೆ ನಡೆದು ಬಂದ ಮಾರ್ಗವನ್ನು ಇದು ಸೂಚಿಸುತ್ತದೆ.

ಈ ನದಿಯ ಉಗಮವು ಹೆರ್ಮಾನ್ ಪರ್ವತದಲ್ಲಿ ಆಗುತ್ತದೆ ಮತ್ತು ಈ ಪರ್ವತವು ಸದ ಹಿಮದಿಂದ ಕೂಡಿರುತ್ತದೆ. ಸತ್ಯವೇದದಲ್ಲಿ ಹೆರ್ಮಾನ್ ಪರ್ವತ ಎಂದರೇನು? ಮತ್ತು ಸದಾ ಕಾಲ ಹಿಮದಿಂದ ಕೂಡಿರುವುದು ಏನನ್ನು ಸೂಚಿಸುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಕೀರ್ತನೆ 133: 2, 3. ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ, ಅಲ್ಲಿಂದ ಅವನ ಅಂಗಿಗಳ ಕೊರಳ ಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಠ ತೈಲದಂತೆಯೂ, ಹೆರ್ಮೋನ್ ಪರ್ವತದಲ್ಲಿ ಹುಟ್ಟಿ

ಚಿಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.

ಆರೋನನ ತಲೆಯ ಮೇಲೆ ಹಾಕುವ ತೈಲವು ಹೆರ್ಮೋನ್ ಪರ್ವತದ ಹಿಮಕ್ಕೆ ಹೋಲಿಸಿದ್ದಾರೆ. ಈ ತೈಲವು ದೇವರಿಂದ ಆರಿಸಲ್ಪಟ್ಟು ಅಭಿಷೇಕ ಹೊಮದುವುದನ್ನು ಸೂಚಿಸುತ್ತದೆ. ಅಭಿಷೇಕ ತೈಲವು ದೇವರು ಪವಿತ್ರಾತ್ಮನಿಂದ ಅಭಿಷೇಕ ಮಾಡುವುದಕ್ಕೆ ಛಾಯೇಯಾಗಿದೆ. ಹಿಮ ದೇವರ ಪವಿತ್ರಾತ್ಮಕ್ಕೆ ಹೋಲಿಕೆಯಾಗಿದೆ ಎಂದಾದರೆ ಹೆರ್ಮೋನ್ ಪರ್ವತವು ಏನನ್ನು ಸೂಚಿಸುತ್ತದೆ: ಕೀರ್ತನೆ 133: ವಚನ : 3 ರಲ್ಲಿ ಸದಾಕಾಲವು ಜೀವವು ಆಶೀರ್ವಾದವು ಇರಬೇಕೆಂದು ಆಜ್ಞಾಪಿಸಿದನು. ನಮಗೆ ತಿಳಿದಿರುವಂತೆ ಪರ್ವತವು ರಾಜ್ಯವನ್ನು ಸೂಚಿಸುತ್ತದೆ. ದೇವರು ಈ ರಾಜ್ಯದಲ್ಲಿ ಜೀವವು ಆಶೀರ್ವಾದವು ಇರುವಂತೆ ನೇಮಕ ಮಾಡಿದ್ದಾರೆ ಎಂದಾಯಿತು. ಈಗಿದ್ದರೆ ಈ ರಾಜ್ಯ ಯಾವುದು? ದೇವರು ಮೊಟ್ಟ ಮೊದಲನೆಯದಾಗಿ ಜೀವವು ಆಶೀರ್ವಾದವನ್ನು ಅನುಗ್ರಹಿಸಿದ್ದು ಎಲ್ಲಿ? ಅದು ಏದೇನ್ ತೋಟದಲ್ಲಿ. ಈ ರಾಜ್ಯವು ಯಾವುದೆಂದರೆ ಏದೇನ್ ತೋಟ. ಈ ರಾಜ್ಯದ ರಾಜ ಆದಾಮ್. ದೇವರು ಆದಾಮನನ್ನು ಸೃಷ್ಟಿ ಮಾಡುವಾಗ ದೇವರು ಆದಾಮನನ್ನು ಸೃಷ್ಟಿ ಮಾಡುವಾಗ ದೇವರು ಆತತನ್ನು ತನ್ನ ಸ್ವರೂಪದಲ್ಲಿ ಆತನ ಹೋಲಿಕೆಗೆ ಸರಿಯಾಗಿ ಉಂಟು ಮಾಡಿದನು ಮತ್ತು ಎಲ್ಲದರ ಮೇಲೆ ದೊರೆತನ ಮಾಡುವ ಆಶೀರ್ವಾದವನ್ನು ಕೊಟ್ಟನು. ಆದಿಕಾಂಡ:1:26. ಆಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ ಅವರು ಸಮುದ್ರದಲ್ಲಿರುವ ಮೀನುಗಳ ಮೇಲೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿ ಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ. ದೇವರು ಮೊದಲು ಈ ತೋಟದಲ್ಲಿ ಜೀವವನ್ನು ನೀಡಿದರು. ಆತನು ಜೀವಶ್ವಾಸವನ್ನು ಊದಲು ಆದಾಮನು ಬದುಕುವ ಪ್ರಾಣಿಯಾದನು ಎಂಬುದಾಗಿ ಸತ್ಯವೇದದಲ್ಲಿ ಓದುತ್ತೇವೆ. ಈಗ ಆದಾಮನು ಭೂಲೋಕದ ಪ್ರಥಮ ರಾಜನಾದನು.

ಈ ಮೂಲಕ ನಮಗೆ ಎರಡು ವಿಷಯಗಳು ಸ್ಪಷ್ಟವಾಗುತ್ತದೆ. ಯಾವುದೆಂದರೆ ಹೆರ್ಮೋನ್ ಪರ್ವತವು ದೇವರು ನೇಮಿಸಿದ ಮೊದಲ ರಾಜ್ಯವಾದ ಏದೇನ್ ತೋಟವನ್ನು ಸೂಚಿಸುತ್ತದೆ ಮತ್ತು ಈ ತೋಟದಲ್ಲಿ ಜೀವವನ್ನು ಪಡೆದುಕೊಂಡ ಮೊದಲ ರಾಜ ಆದಾಮನು ಯೋರ್ದಾನ್ ನದಿಗೆ ಹೋಲಿಕೆಯಾಗಿದ್ದಾನೆ ಹೀಗೆ ಹೆರ್ಮೋನ್ ಪರ್ವತದಲ್ಲಿನ ಹಿಮವು ಕರಗಿ ನಾಲ್ಕು ನದಿಗಳಾಗಿ ಹರಿದು ಲೇಕ್ ಉಲ್ಲಾಕ್ಕೆ ಬಂದು ಸೇರುತ್ತದೆ. ಲೇಕ್ ಉಲ್ಲಾದಲ್ಲಿರುವ ನದಿಯ ನೀರು ಶುದ್ಧವಾಗಿಯೂ, ತಂಪಾಗಿಯೂ ಇತ್ತು. ಇದು ಏನನ್ನು ಸೂಚಿಸುತ್ತದೆ ಎಂದರೆ ದೇವರು ತನಗಿದ್ದ ನಾಲ್ಕು ಗುಣಲಕ್ಷಣದಲ್ಲಿ ತನ್ನ ಹೋಲಿಕೆಗೆ ಸರಿಯಾಗಿ ಆದಾಮನನ್ನು ಸೃಷ್ಟಿಸಿದನು ಮತ್ತು ಆದಾಮನು ಸೃಷ್ಟಿಯ ದಿನದಲ್ಲಿ ಪರಿಶುದ್ಧವಾದ ಹಾಗು ಪರಿಪೂರ್ಣವಾದ ಮನುಷ್ಯನಾಗಿ ಯಾವ ಪಾಪವನ್ನು ಅರಿಯದವನಾಗಿ ಇದ್ದ ಸ್ಥಿತಿಯನ್ನು ಸೂಚಿಸುತ್ತದೆ. ಆದರೆ ಆದಾಮನು ದೇವರ ಆಜ್ಞೆಯನ್ನು ಮೀರಿ ಪಾಪ ಮಾಡಿದಾಗ ದೇವರು ಆದಾಮನನ್ನು ಏದೇನ್ ತೋಟದಿಂದ ಅವನನ್ನು ಹೊರಗೆ ಹೊರಡಿಸಿಬಿಟ್ಟರು. ಘನ್ನಬಾರದೆಂದು ಹೇಳಿದ ಹಣ್ಣನ್ನು ತಿಂದು ದೇವರಿಗೆ ಅವಿಧೇಯನಾದ ಕಾರಣ ಅವನು ದೇವರ ಆಶೀರ್ವಾದವನ್ನು ಕಳೆದುಕೊಂಡು ಶಾಪಗ್ರಸ್ಥನಾದನು. ಆದಿಕಾಂಡದಲ್ಲಿ ನಾವು ಓದುವಂತೆ ದೇವರು ಅನಿಗೆ ನೀನು ಬೆವರು ಸುರಿಸಿ ಕಷ್ಟಪಟ್ಟು ದುಡಿಯಬೇಕು ಎಂದು ಶಪಿಸಿದನು. ಇಲ್ಲಿ ಕೇವಲ

ಆದಾಮನು ಮಾತ್ರವಲ್ಲ ಬದಲಿಗೆ ಅವನಲ್ಲಿ ಉಂಟಾಗುವ ಅವನ ಸಂತತಿಯು ದೇವರ ಆಶೀರ್ವಾದವನ್ನು ಕಳೆದುಕೊಂಡಿತು ಮತ್ತು ಅವರಿಗೂ ಸಹ ಏದೇನ್ ತೋಟದಲ್ಲಿ ಪ್ರವೇಶವು ನಿಷೇದವಾಯಿತು. ಇದು ಹೇಗೆಂದರೆ ಒಬ್ಬ ಮನುಷ್ಯನಿಂದ ಪಾಪವು ಪಾಪದಿಂದ ಮರಣವು ಇಡೀ ಲೋಕದಲ್ಲೆಲ್ಲ ಪಸರಿಸಿತು. ಪ್ರಕಟನೆ 17:15. ಆಜಾರಸ್ತ್ರೀಯು ವಾಸಿಸಿರುವ ನೀರುಗಳನ್ನು ಕಂಡಿಯಲ್ಲ? ಅವು ಪ್ರಜೆ, ಸಮೂಹ ಜನ ಭಾಷೆಗಳನ್ನು ಸೂಚಿಸುತ್ತದೆ.

ಹೆರ್ಮೋನ್‌ನಿಂದ ಹೊರಟ ಆ ನಾಲ್ಕು ನದಿಗಳು ಆದಾಮನಿಂದುಂಟಾದ ಲೋಕದ ಜನಾಂಗವನ್ನು ಸೂಚಿಸುತ್ತದೆ.

ಅಪೊಸ್ತಲ:17:26. ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿ.......

ಒಬ್ಬನಿಂದಲೇ ಅಂದರೇ ಆದಾಮನಿಂದಲೆ ಲೋಕದ ಸರ್ವ ಜನಾಂಗವು ಉಂಟಾಯಿತು ಆದಾಮನೆ ಎಲ್ಲಾ ಮನುಷ್ಯರಿಗೆ ಮೂಲ ಪಿತೃ ಆದಾಮನದಲ್ಲಿ ಪ್ರಪಂಚದಲ್ಲಿರುವ ಎಲ್ಲಾ ಜನರು ನಮ್ಮ ರಕ್ತ ಸಂಬಂಧಿಗಳು.

ಲೋಕದಲ್ಲಿ ಈ ಒಬ್ಬನಿಂದಲೇ ಪಾಪವು ಮತ್ತು ಅದರ ಸಂಬಂಧದಿಂದ ಮರಣವು ಉಂಟಾಯಿತು. ಹೇಗೆಂದರೆ ರೋಮ 5:12. ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು. ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. ಈ ವಚನಗಳಲ್ಲಿ ಹೇಳುವಂತೆ ಒಬ್ಬನಿಂದಲೇ ಪಾಪ ಮರಣವು ಲೋಕದಲ್ಲಿ ವ್ಯಾಪಿಸಿತು. ಇಲ್ಲಿ ದೇವರು ಆದಾಮನ ಸಂತತಿಗೆ ಏದೇನ್ ತೋಟದಲ್ಲಿ ಇದ್ದು ಅವರು ವಿದೇಯತೆಯನ್ನು ತೋರಿಸುವ ಅವಕಾಶವನ್ನು ನೀಡಲಿಲ್ಲ. ಯಾಕೆಂದರೆ ದೇವರಿಗೆ ಮುಂಚಿತವಾಗಿಯೇ ಅವರು ಪಾಪರಹಿತರಾಗಿ ಜೀವಿಸಲು ಸಾಧ್ಯವಿಲ್ಲವೆಂದು ತಿಳಿದಿತ್ತು. ಪರಿಪೂರ್ಣ ಮನುಷ್ಯನಾದ ಆದಾಮನಿಂದಲೇ ಆ ವಿಧೇಯತೆಯನ್ನು ತೋರಿಸಲು ಸಾಧ್ಯವಾಗದೆ ಇರುವಾಗ ಆದಾಮನಿಂದ ಅಂದರೆ ಪಾಪದಲ್ಲಿ ಬಿದ್ದು ಪರಿಪೂರ್ಣತೆಯನ್ನು ಕಳೆದುಕೊಂಡಿರುವ ಆದಾಮನ ಸಂತತಿಯು ಹೇಗೆ ತಾನೇ ವಿದೇಯತೆಯನ್ನು ತೋರಿಸಲು ಸಾಧ್ಯ ಅದು ಮಾತ್ರವಲ್ಲದೇ ಅವರಿಗೆ ಅನುಭವದ ಕೊರತೆ ಇರುವುದರಿಂದ ದೇವರು ಅವರಿಗೆ ಇಂತಹ ಒಂದು ಅವಕಾಶವನ್ನು ನೀಡಲಿಲ್ಲ. ಆದಾಮನಲ್ಲಿ ಈ ಅನುಭವವನ್ನು ಪಡೆಯಲಿ ಎಂದು ದೇವರು ಅವರನ್ನು ಪಾಪಕ್ಕೆ ಒಪ್ಪಿಸಿಕೊಟ್ಟರು. ರೋಮಾ 5:12. ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಎಲ್ಲರ ಮೇಲೆ ವ್ಯಾಪಿಸಿತು. ಈ ಕಾರಣದಿಂದಲೇ ಲೋಕದಲ್ಲಿ ಹುಟ್ಟಿದ ಚಿಕ್ಕ ಚಿಕ್ಕ ಮಕ್ಕಳು ಕೂಡ ಸಾಯುತ್ತಿರುವುದನ್ನು ನಾವು ನೋಡುತ್ತೇವೆ. ಅಪೊಸ್ತಲನಾದ ಪೌಲನು ರೋಮ ಪುರದವರಿಗೆ ಬರೆದ ಪತ್ರಿಕೆಯಲ್ಲಿ ಹೇಳುವಂತೆ ನೀತಿವಂತನು ಇಲ್ಲ ಒಬ್ಬನಾದರೂ ಇಲ್ಲ ಎಲ್ಲರೂ ಪಾಪ ಮಾಡಿ ದೇವರಿಂದ ದೂರವಾಗಿದ್ದಾರೆ. ಇದು ಮಾತ್ರವಲ್ಲದೆ ದಾವೀದನು ನಾನು ಮಾತೃ ಗರ್ಭದಲ್ಲಿ ಹುಟ್ಟಿದಂದಿನಿಂದ ದ್ರೋಹಿಯೇ ಎಂದು ಹೇಳುವುದನ್ನು ಸತ್ಯವೇದದಲ್ಲಿ ನೋಡುತ್ತೇವೆ. ಈ ಪಾಪದ ಸ್ಥಿತಿಗೆ ಯಾರು ಕಾರಣ ಕರ್ತನೆಂದರೇ ಅದು ಆದಾಮ; ಆದಾಮನಿಂದ ಲೋಕದಲ್ಲಿ ಪಾಪವು ಮತ್ತು ಮರಣವು ಉಂಟಾಯಿತು.

ರೋಮಾ 5:12 ರಲ್ಲಿ ಓದುವಂತೆ ಧರ್ಮಶಾಸ್ತ್ರವು ಕೊಡುವುದಕ್ಕೆ ಮೊದಲು ಪಾಪವು ಲೋಕದಲ್ಲಿ ಇತ್ತು ಎಂಬುದಾಗಿ ಓದುತ್ತೇವೆ. ಧರ್ಮಶಾಸ್ತ್ರವು ಮೋಶಿಯ ಮುಖಾಂತರ ಕೊಡಲ್ಪಡುವುದಕ್ಕೆ ಮುಂಚೆಯೇ ಪಾಪವು ಲೋಕದಲ್ಲಿ ವ್ಯಾಪಿಸಿತು. ಅಂದರೆ ಮರಣವು ಸಹ ಇತ್ತು ಎಂಬುದನ್ನು ನೋಡುತ್ತೇವೆ. ದೇವರು ಆದಾಮನನ್ನು ಸೃಷ್ಟಿ ಮಾಡಿದ 2,000 ವರ್ಷಗಳ ನಂತರ ಮೋಶೆಯ ಮುಖಾಂತರ ಧರ್ಮಶಾಸ್ತ್ರವನ್ನು ಕೊಟ್ಟರು. ಅಲ್ಲಿಯವರೆಗೆ ದೇವರು ಯಾರಿಗೆ ಯಾವ ಆಜ್ಞೆಯನ್ನಾಗಲಿ ನೇಮ ಕಟ್ಟಳೆಗಳನ್ನಾಗಲಿ ಕೊಟ್ಟಿರಲಿಲ್ಲ. ಇದನ್ನು ತರ್ಕಬದ್ಧವಾಗಿ ನೋಡುವುದಾದರೆ ಧರ್ಮಶಾಸ್ತ್ರ ಇಲ್ಲದೆ ಇರುವಾಗ ಒಬ್ಬರನ್ನು ಮರಣದಂಡನೆಗೆ ಒಪ್ಪಿಸಿಕೊಡುವುದಕ್ಕೆ ಸಾಧ್ಯವೇ ಇಲ್ಲ. ಯಾಕೆಂದರೆ ಧರ್ಮ ವಿಧಿಯಾಗಲಿ ನೇಮಗಳಾಗಲಿ ಇಲ್ಲದೆ ಮರಣದಂಡನೆ ಕೊಡಲು ಸಾಧ್ಯವಿಲ್ಲ. ನೇಮಗಳಿಲ್ಲದೆ ಅದನ್ನು ಮೀರಿ ನಡೆಯುವುದು ಅಸಾಧ್ಯ. ಮೀರಿ ನಡೆಯದೆ ಅದರಿಂದ ಉಂಟಾಗುವ ಶಿಕ್ಷೆಯನ್ನು ಹೊಂದುವುದು ಅಸಾಧ್ಯ. ಈಗಿರುವಲ್ಲಿ ಮರಣ ದಂಡನೆಯು ಲೋಕದಲ್ಲಿ ಧರ್ಮಶಾಸ್ತ್ರ ಕೊಡುವುದಕ್ಕೆ ಮುಂಚೆ ವಿಧಿಸಲು ಹೇಗೆ ಸಾಧ್ಯ. ಇದನ್ನು ಅಪೊಸ್ತಲನಾದ ಪೌಲನು ಇಲ್ಲಿ ಚರ್ಚಿಸುತ್ತಿದ್ದಾರೆ. ನ್ಯಾಯ ಪ್ರಮಾಣವಿಲ್ಲದೆ ಲೋಕವು ಮರಣ ದಂಡನೆಯನ್ನು ಅನುಭವಿಸಲು ಸಾಧ್ಯವಿಲ್ಲ. ಈಗಿದ್ದರೇ ರೋಮ 5:13 ಧರ್ಮಶಾಸ್ತ್ರವಿಲ್ಲದೆ ಪಾಪವು ಲೆಕ್ಕಕ್ಕೆ ಬರುವುದಿಲ್ಲ. ಆದರೂ ಆದಾಮನಿಂದ ಮೋಶಿಯವರೆಗೆ ಮರಣದ ಆಳ್ವಿಕೆ ನಡೆಯುತ್ತಿತ್ತು. ಇದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು. ಈಗಿರುವಲ್ಲಿ ದೇವರನ್ನು ಅನೀತಿವಂತರೆಂದು ಹೇಳಲು ಸಾಧ್ಯವೇ? ಖಂಡಿತ ಇಲ್ಲ ಈ ವಾಕ್ಯದ ಅರ್ಥವೇನೆಂದರೆ ಒಬ್ಬ ಮನುಷ್ಯನ ಪಾಪದಿಂದ ಲೋಕದ ಇತರರು ಸಹ ಪಾಪದ ಸಂಬಳವಾದ ಮರಣದ ತೀರ್ಪಿಗೆ ಒಳಗಾದರು. ಈಗೆ ದೇವರು ಆದಾಮನಲ್ಲಿ ಎಲ್ಲರನ್ನು ಮರಣ ಪಾತ್ರೆಂದು ಪರಿಗಣಿಸಿದರು. ರೋಮ 5:14: ಆದಾಮನು ದೇವಾಜ್ಞೆ ಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೆ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು.

ಇದು ಹೇಗೆ ಸಾಧ್ಯ? ಇದು ಹೇಗೆಂದರೆ ಒಬ್ಬ ಮನುಷ್ಯನಿಂದ ಪಾಪವು ಪಾಪದಿಂದ ಮರಣವು ಲೋಕದಲ್ಲಿ ವ್ಯಾಪಿಸಿತು ಇದು ದೇವರ ಯೋಜನೆಯಾಗಿತ್ತು. ಈ ಹಿಂದೆ ನಾವು __________ ಈಡು ಬಲಿ ಪಾಠವನ್ನು ಕೂಲಂಕುಶವಾಗಿ ತಿಳಿದುಕೊಂಡಿದ್ದೇವೆ. ನಮ್ಮ ಮೂಲ ಪಿತೃವಾದ ಆದಾಮನ ಪಾಪದಿಂದ ನಮ್ಮನ್ನು ದಂಡಿಸುವುದು ಯಾವ ನ್ಯಾಯ ಎಂಬ ಪ್ರಶ್ನೆ ನಮ್ಮಲ್ಲಿ ಹುಟ್ಟಬಹುದು. ಹಾಗಾದರೆ ದೇವರು ಅನ್ಯಾಯ ಮಾಡುವರೇ? ನ್ಯಾಯ ನೀತಿಯನ್ನು ನಡೆಸುವ ದೇವರು ಈಗೇ ಮಾಡಿದ್ದಾರೆ ಎಂದರೇ ಅದಕ್ಕೊಂದು ನಿರ್ದಿಷ್ಟವಾದ ಕಾರಣ ಇರಲೇಬೇಕಲ್ಲವೇ ಆಗಿದ್ದರೇ ಆ ಕಾರಣವೇನು? ಮುಂದಿನ ವಚನವನ್ನು ಗಮನಿಸುವ ರೋಮ 5:14. ಆ ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕ ಪುರುಷನಾಗಿದ್ದಾನೆ. ಇಲ್ಲಿ ತಿಳಿಸಿರುವಂತೆ ಆ ಆದಾಮನು ಬರಬೇಕಾಗಿರುವ ಒಬ್ಬ ಪುರುಷನಿಗೆ ಛಾಯೆಯಾಗಿದ್ದಾನೆ. ಆ ಒಬ್ಬ ಪುರುಷ ಯಾರೆಂದರೆ ನಮ್ಮ ರಕ್ಷಕನಾಗಿರುವ ಕ್ರಿಸ್ತ ಯೇಸುವೇ. ಈಗೆ ಯಾವಾಗ ಆದಾಮನಿಂದ ಎಲ್ಲರೂ ಪಾಪದಲ್ಲಿ ಬಿದ್ದರೂ ಆಗ ಇಡೀ ಲೋಕವು ಪಾಪದಿಂದ ಕೂಡಿ ಅಶುದ್ಧವಾಯಿತು. ಅಂತೆಯೇ ಉಲ್ಲಾದಿಂದ ಹೊರಟ ನದಿ ಮುಂದೆ ಸಾಗುತ್ತ ಹೀಗೆ ಗಲಿಲಾಯಕ್ಕೆ ಸೇರುವಷ್ಟರಲ್ಲಿ ಕಲುಶಿತವಾಯಿತೋ ಹಾಗೆಯೇ ಮಾನವ ಕುಲವು ಪಾಪದಿಂದ ಅಶುದ್ಧವಾಯಿತು. ಈಗೇ ಮೊದಲಿದ್ದ ಲೋಕವು ಕೇವಲ 1,560 ವರ್ಷಗಳಲ್ಲಿ ಸಂಪೂರ್ಣವಾಗಿ ಅಶುದ್ಧವಾಯಿತು; ದೇವರು ಈ ಅಶುದ್ಧವಾದ ಲೋಕದಲ್ಲಿ ಪಾಪವು ಅಧಿಕವಾಗಿರುವುದನ್ನು ಕಂಡರು. ಈ ಲೋಕದಲ್ಲಿ ಅಧಿಕವಾದ ಪಾಪಕ್ಕೆ ಕಾರಣವೇನು? ಆದಿ 6:2. ಓದುವಂತೆ ದೇವರು ದೇವದೂತರನ್ನು ಮನುಷ್ಯರ

ಮೇಲೆ ನೇಮಿಸಿದರು. ಆದರೆ ದೇವದೂತರು ಭೂಲೋಕದಲ್ಲಿ ತಮಗಿಷ್ಟವಾದ ಸ್ತ್ರೀಯರನ್ನು ನೋಡಿ ಮದುವೆ ಮಾಡಿಕೊಂಡರು.

ಏದನ್ ತೋಟದಲ್ಲಿ ದೇವರು ಲೂಸಿಫರ್ ಎನಿಸಿಕೊಳ್ಳುತ್ತಿದ್ದ ಸೈತನನಿಗೆ ಮಾನವರನ್ನು ನಡೆಸಲು ನೇಮಕ ಮಾಡಿದರು. ಆದರೆ ಈ ಸೈತಾನನು ಆದಾಮ ಹವ್ವಳನ್ನು ವಂಚಿಸಿ ದೇವರಿಗೆ ಅವಿಧೇಯರಾಗುವಂತೆ ಮಾಡಿದ ಕಾರಣ ಅವನ ನಂತರ ಆದಾಮನಲ್ಲಿ ಹುಟ್ಟಿದ ಇತರ ಸಂತತಿಯವರ ಮೇಲೆ ದೇವರು ದೇವದೂತರನ್ನು ಮನುಷ್ಯರು ಪಾಪ ಮಾಡದೆ ದೇವರಿಗೆ ವಿಧೇಯರಾಗಿ ನಡೆಯುವಂತೆ ಸಹಾಯ ಮಾಡಲು ನೇಮಿಸಿದ್ದರು. ಆದರೆ ಈ ದೇವದೂತರು ಸಹ ದೇವರಿಗೆ ವಿರುದ್ಧವಾಗಿ ಕಾರ್ಯವನ್ನು ಮತ್ತು ದೇವರ ಚಿತ್ತಕ್ಕೆ ವಿರುದ್ಧವಾದ ಕಾರ್ಯ ಮಾಡಿದರು. ಇಬ್ರಿಯ 2:5. **'ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ'** ಇದು ಒಂದು ಸಮಯದಲ್ಲಿ ದೇವದೂತರಿಗೆ ಅಧೀನ ಮಾಡಿದ್ದರು ಎಂದು ಸೂಚಿಸುತ್ತದೆ. ಹೇಗೆಂದರೆ ಈ ದೇವದೂತರಿಗೆ ಮನಷ್ಯ ರೂಪವನ್ನು ಹೊಂದುವರಂತಹ ಒಂದು ವಿಶೇಷ ಅನುಗ್ರಹವನ್ನು ದೇವರು ನೀಡಿದ್ದರು. ಅಂದರೇ ಅವರು ಮಾಂಸಿಕ ಶರೀರದಿಂದ ಆತ್ಮೀಕ ಶರೀರಕ್ಕೆ, ಆತ್ಮೀಕ ಶರೀರದಿಂದ ಮಾಂಸಿಕ ಶರೀರಕ್ಕೆ ಮಾರ್ಪಾಡು ಹೊಂದಬಹುದಾಗಿತ್ತು. ಉದಾ: ಅದಿಕಾಂಡ 18:1. ನೋಡುವಂತೆ ದೇವದೂತರು ಮನುಷ್ಯ ರೂಪದಲ್ಲಿ ಬಂದು ಅಬ್ರಹಾಂನನ್ನು ಸಂದಿಸಿದ್ದು ಈ ಮೂರು ದೇವದೂತರಲ್ಲಿ ನಮ್ಮ ಕ್ರಿಸ್ತನು ಇದ್ದನೆಂದು ನೋಡುತ್ತೇವೆ ಇದೇ ದೇವದೂತರು ನಂತರದಲ್ಲಿ ಲೋಟನನ್ನು ಸಂದಿಸಿದ್ದು; ಯಾಕೋಬನು ರಾತ್ರಿಯಿಡೀ ದೇವದೂತರೊಂದಿಗೆ ಹೋರಾಡಿದ್ದು ಮತ್ತು ಸಂಸೋನನು, ತಂದೆ, ತಾಯಿಯವರೊಂದಿಗೆ ಬಲಿ ಕೊಡುವಾಗ ದೂತನು ಆಕಾಶಕ್ಕೆ ಹಾರಿ ಹೋಗುವುದನ್ನು ನೋಡುತ್ತೇವೆ. ಆಗ ದೇವದೂತರಿಗೆ ಇಂತಹ ಒಂದು ವಿಶೇಷ ಅನುಗ್ರಹವನ್ನು ದೇವರು ನೀಡಿದ್ದರು. ಆದರೆ ಇದನ್ನು ದುರುಪಯೋಗಿಸಿಕೊಂಡು ದೇವದೂತರು ಮಾಂಸದಲ್ಲಿರುವ ಮನುಷ್ಯ ಪುತ್ರಿಯರನ್ನು ಆಶಿಸಿ ಅವರನ್ನು ಮದುವೆ ಮಾಡಿಕೊಂಡರು. ಇವರಲ್ಲಿ ಹುಟ್ಟಿದ ಮಕ್ಕಳು ಮಹಾ ಶರೀರಗಳಾಗಿ ಹುಟ್ಟಿದರು. ಆದಿಕಾಂಡ 6:4 ಉದಾ: ಭೀಮ, ಬಕಾಸುರ, ರಾವಣ, ಹೆರ್ಕುಲೇಸ್ ಇತ್ಯಾದಿ ಇವರು ಮಹಾ ಶರೀರಗಳ ಪಡೆದು ಸಾಮಾನ್ಯ ಮನುಷ್ಯರಿಗಿಂತ ಬಹಳ ಬಲಶಾಲಿಗಳಾಗಿದ್ದರು. ಇವರನ್ನು ದೈತ್ಯರು ಹಾಗೂ ರಾಕ್ಷಸರು ಎಂದು ಕರೆಯಬಹುದು. ಇವರು ಇತರರಿಗಿಂತ ಬಲಶಾಲಿಗಳಾಗಿದ್ದುದರಿಂದ ಮತ್ತು 50–60 ಅಡು ಎತ್ತರವಿದ್ದುದರಿಂದ ಇತರ ಸಾಮಾನ್ಯ ಮನುಷ್ಯರ ಮೇಲೆ ಆಳ್ವಿಕೆ ಮಾಡಲು ಶುರು ಮಾಡಿದರು. ದೇವರು ದೂತರಿಗೆ ಮದುವೆ ಮಾಡಿಕೊಳ್ಳುವ ಅವಕಾಶವನ್ನು ನೀಡಿರಲಿಲ್ಲ. ಆದಿ: 6:5 ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನು ಅವರ ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಕೆಟ್ಟದಾಗಿರುವುದನ್ನು ಯೆಹೋವನು ನೋಡಿ...

ಯೂದ 1: ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟು ದೇವದೂತರಿಗೆ ದೇವರು ನಿತ್ಯವಾದ ಬೇಡಿಗಳನ್ನು ಹಾಕಿ ಮಹಾ ದಿನದಲ್ಲಿ ಆಗುವ ದಂಡನೆಯ ತೀರ್ಪಿಗಾಗಿ ಅವರನ್ನು ಕತ್ತಲೆಯೊಳಗೆ ಇಟ್ಟಿದ್ದಾನೆ. ಆದುದರಿಂದ ದೇವರು ಇವರನ್ನು ದಂಡಿಸಬೇಕೆಂದು ಮೊದಲನೆ ಲೋಕವನ್ನು ನೀರಿನಿಂದ ನಾಶ ಮಾಡಬೇಕೆಂದು ಯೋಜನೆ ಮಾಡಿದರು ಈಗ ದೇವರು ಜಲ ಪ್ರಳಯದ ಮೂಲಕ ಕೆಟ್ಟು ಹೋಗಿದ್ದ ಮೊದಲನೆ ಲೋಕವನ್ನು ನಾಶ ಮಾಡಿದರು (ವ್ಯಭಿಚಾರ) ದೂತರ ಮಾಡದ ಪಾಪ) ಮತ್ತಾಯ 22:3.

ಹೇಗೆ (ಓರ್ದಾನ್ ನದಿಯು) ಉಲ್ಲಾದಲ್ಲಿ ಶುದ್ಧವಾಗಿದ್ದ ನೀರು ಮುಂದೆ ಸಾಗುತ್ತ ಗಲಿಲಾಯಕ್ಕೆ ಸೇರುವಷ್ಟರಲ್ಲಿ ಕಲುಶಿತವಾಯಿತೋ ಹಾಗೆಯೇ ಮೊದಲನೇ ಲೋಕವು ಈ ಕೆಟ್ಟ ಕಾರ್ಯಗಳಿಂದ ಕಲುಶಿತವಾಯಿತು. ಜನರು ಆಲೋಚಿಸುವುದೆಲ್ಲ ಬರಿ ಕೆಟ್ಟದಾಗಿತ್ತು. ದೇವರು ಈ ರಾಕ್ಷಸರನ್ನು ನಾಶ ಮಾಡಬೇಕೆಂದು ಯೋಚಿಸಿದರು. ಇವರನ್ನು ಜಲ ಪ್ರಳಯದಲ್ಲಿ ನಾಶ ಮಾಡಬೇಕೆಂದು ಯೋಚಿಸಿ ನೀತಿವಂತನಾದ ನೋಹನಿಗೆ ನಾವೆಯನ್ನು ಕಟ್ಟಲು ಹೇಳಿದರು. ಅನಂತರ 40 ದಿನ ಹಗಲಿರುಳು ಮಳೆ ಬರಲು ಮೊದಲನೆ ಲೋಕವನ್ನು ನಾಶಮಾಡಿದರು. ಈಗೆ ಮೊದಲನೆ ಲೋಕದಲ್ಲಿದ್ದ ದುಷ್ಟ ಜನರು ಹಾಗೂ ದೇವದೂತರ ಸಂಬಂಧದಿಂದ ಹುಟ್ಟಿದ ರಾಕ್ಷಸರೂ ಕೂಡ ಈ ಜಲ ಪ್ರಳಯದಲ್ಲಿ ನಾಶವಾದರು ಮತ್ತು ಪಾಪ ಮಾಡಿದ ದೇವದೂತರು ಇವರು ಮಾರ್ಪಟ್ಟು ಜಲಪ್ರಳಯದಿಂದ ತಪ್ಪಿಸಿಕೊಂಡರು. ಇವರನ್ನು ದೇವರು ದಂಡನೆಗಾಗಿ ವಾಯುಮಂಡಲದಲ್ಲಿ ಬಂಧಿಸಿದರು.

II ಪೇತ್ರ 2:4: ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯ ತೀರ್ಪನ್ನು ಹೊಂದುವುದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೇ ಗುಂಡಿಗಳಿಗೆ ಒಪ್ಪಿಸಿದನು.

ಎಫೆಸ 2:2: ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ಅಂದರೆ ಸೈತಾನನು ಸಹ ಈ ವಾಯುಮಂಡಲದಿಂದ ಲೋಕವನ್ನು ಆಳ್ವಿಕೆ ಮಾಡುತ್ತಿದ್ದಾನೆ ಎಂದು ನೋಡುತ್ತೇವೆ. ದೇವರು ಈ ರೀತಿಯಾಗಿ ಮೊದಲನೇ ಲೋಕವನ್ನು ಜಲಪ್ರಳಯದಲ್ಲಿ ನಾಶಮಾಡಿದರು.

ಯಾರ್ಧನ್ ನದಿಯು ಉಲ್ಲಾದಿಂದ ಹರಿದು ಕಲುಶಿತವಾಗಿ ಗಲಿಲಾಯಕ್ಕೆ ಶರಿದ ನಂತರ ಒಂದು ಸ್ಥಳದಲ್ಲಿ ಸೇರುತ್ತದೆ. ಅಲ್ಲಿ ಅದರ ರಭಸ ಕಳೆದುಕೊಂಡು ಸ್ವಲ್ಪ ಮಟ್ಟಿಗೆ ಶುದ್ಧವಾಗುತ್ತದೆ. ಅಂದರೆ ದೇವರು ಈ ಜಲಪ್ರಳಯದಲ್ಲಿ ಈ ದುಷ್ಟರನ್ನು ನಾಶಮಾಡದೇ ಇದ್ದಿದ್ದರೆ ಇಡೀ ಭೂಮಿ ದುಷ್ಟತ್ವಕ್ಕೆ ಒಳಗಾಗಿ ಹೋಗುತ್ತಿತ್ತು. ಆದುದರಿಂದ ಗಲಿಲಾಯ ಸಮುದ್ರದ ವೇಗವು ನಿಯಂತ್ರಿತವಾದಂತೆಯೇ ದೇವರು ಜಲಪ್ರಳಯವನ್ನು ನಿಯಂತ್ರಿಸಿದರು. ಇಲ್ಲದಿದ್ದರೆ ಇಡೀ ಲೋಕವೇ ಜಲಪ್ರಳಯದಲ್ಲಿ ನಾಶವಾಗಿ ಹೋಗುತ್ತಿತ್ತು.

ಇದರ ನಂತರ ಗಲಿಲಾಯ ಸಮುದ್ರದಿಂದ ನೀರು ಮುಂದೆ ಹರಿದು ವಕ್ರ ವಕ್ರವಾದ ಮಾರ್ಗವಾಗಿ ('ಡೆಡ್ ಸೀ') ಲವಣ ಸಮುದ್ರಕ್ಕೆ ಬಂದು ಸೇರುತ್ತದೆ. ಅದೇ ಪ್ರಕಾರ ಎರಡನೇ ಲೋಕವು ಪ್ರಾರಂಭವಾಯಿತು. ಆದರೆ ಈ ಎರಡನೇ ಲೋಕದಲ್ಲಿದ್ದ ಮಾನವರು ಸಹ ಪರಿಪೂರ್ಣವಾಗಿರಲಿಲ್ಲ. ಮೊದಲನೆ ಲೋಕದಲ್ಲಿ ಇದ್ದಂತಹ ಪಾಪ ಕಡಿಮೆಯಾಯಿತು. ಆದರೆ ಅವರು ನಡೆದ ಮಾರ್ಗ ವಕ್ರ ವಕ್ರವಾಗಿದ್ದವು. ಇಸ್ರಾಯೇಲ್ಯರಿಗೆ ದೇವರು ಧರ್ಮಶಾಸ್ತ್ರವನ್ನು ಕೊಟ್ಟರು. ಆದರೆ ಧರ್ಮಶಾಸ್ತ್ರದ ಮೂಲಕ ಯಾರು ನೀತಿವಂತರಾಗಲು ಸಾಧ್ಯವಾಲಿಲ್ಲ. ರೂಮ: 3:20. ಓದಿದಂತೆ ದೇವರ ದೃಷ್ಟಿಯಲ್ಲಿ ಧರ್ಮ ಪ್ರಮಾಣದಿಂದ ಯಾರು ನೀತಿವಂತರಾಗಲು ಸಾಧ್ಯವಾಗಲಿಲ್ಲ. ಯಾಕೆಂದರೆ ಅವರ ಮಾರ್ಗಗಳು ಬಹಳ ವಕ್ರವಾಗಿದ್ದವು. ಮನುಷ್ಯರ ಮಾರ್ಗಗಳೆಲ್ಲವೂ ಕೆಟ್ಟವುಗಳೇ ಮೋಸವಾದವುಗಳೆ. ಪ್ರಸಂಗಿ : 7:29. ದೇವರು ಮನುಷ್ಯರನ್ನು ಸತ್ಯವಂತರನ್ನಾಗಿ ಸೃಷ್ಟಿಸಿದರುಉ. ಹೆರ್ಮೋನ್ ಪರ್ವತದ ಶುದ್ಧತೆಯಂತೆ. ದೇವರು ಮನುಷ್ಯನನ್ನು ಸೃಷ್ಟಿಸಿದಾಗ ಪರಿಪೂರ್ಣ ಸಿದ್ಧಿಯಲ್ಲಿದ್ದನು. ಆದರೆ ಅವರಾದರೂ ಬಹು ಯುಕ್ತಿಗಳನ್ನು ಕಲ್ಪಿಸಿಕೊಂಡರು. ಉದಾ: ಮಿಲಿಟರಿ, ಆಸ್ಪತ್ರೆ ಇತ್ಯಾದಿಗಳನ್ನು ಮಾಡಿಕೊಂಡು ಲೋಕದಲ್ಲಿಯೇ ಶಾಶ್ವತವಾಗಿ ನೆಲೆಸುವೆವೆಂದು ಭಾವಿಸಿಕೊಂಡು ನಿಮ್ರೋದನ ಕಾಲದಲ್ಲಿ

ಬಾಬೇಲಿನ ಗೋಪುರವನ್ನು ಕಟ್ಟಿಕೊಳ್ಳಲು ದೇವರು ಅವರ ಭಾಷೆಯನ್ನು ತಾರು ಮಾರು ಮಾಡಿದ್ದು. ಯೆಶಾಯ 59: 7, 8 ಮನುಷ್ಯನ ಕಾಲುಗಳು ಕೇಡನ್ನು ಹಿಂಬಾಲಿಸಿ ಓಡುತ್ತದೆ. ನಿರಪರಾಧಿಯ ರಕ್ತವನ್ನು ಸುರಿಸಲು ಆತುರಪಡುತ್ತಾರೆ. (ಆತ್ಮಹತ್ಯಾ ದಳಗಳು ಭಯೋತ್ಪಾದಕರ ದಾಳಿಗಳಿಂದ ನಿರಪರಾಧಿಯ ರಕ್ತವನ್ನು ಸುರಿಸುತ್ತಾರೆ. ಇವರ ಯೋಚನೆಗಳೆಲ್ಲವೂ ಅಧರ್ಮವೇ (ಬಯಾಲಜಿಕಲ್ ವೆಪನ್ಸ್, ವೈರಸ್ ದಾಳಿ, ನ್ಯೂಕ್ಲಿಯರ್ ಬಾಂಬ್ ಉತ್ಪಾದನೆ ಭೂಮಿಯನ್ನು 10 ಪಟ್ಟು ನಾಶ ಮಾಡಲು ಸಮರ್ಥ್ಯವಿರುವ ಅಣುಬಾಂಬ್‌ಗಳನ್ನು ಉತ್ಪಾದನೆ ಮಾಡಿಕೊಂಡಿದ್ದಾರೆ. ಇವರು ಹೋಗುವ ಮಾರ್ಗದಲ್ಲಿ ನಾಶನವು ಭಂಗವು ಇರುವುದು. ಇವರು ಸಮಧಾನದ ಮಾರ್ಗವನ್ನೇ ಅರಿಯರು. ಉದಾ: ನರೇಂದ್ರ ಮೋದಿ ಪಾಕಿಸ್ತಾನಕ್ಕೆ ಹೋಗಿ ಬಂದ ನಂತರ ಗಡಿಗಳಲ್ಲಿ ದಾಳಿಗಳೂ ಪ್ರಾರಂಭವಾಯಿತು. ಸಮಾಧಾನದ ಮಾರ್ಗವನ್ನು ಅರಿಯರು. ಇವರ ಹಾದಿಗಳಲ್ಲಿ ಯಾವ ನ್ಯಾಯವೂ ಇಲ್ಲ; ಮಾರುಕಟ್ಟೆಯಲ್ಲಿ ಮಾರುವವರು ಕಪಟದ ಮೋಸದ ಮಾತಿನಿಂದ ಗ್ರಾಹಕರಿಗೆ ಮೋಸ ಮಾಡಲು ಪ್ರಯತ್ನಿಸುತ್ತಾರೆ. ತಮ್ಮ ಮಾರ್ಗವನ್ನು ವಕ್ರ ಮಾಡಿಕೊಂಡಿದ್ದಾರೆ.

ಯಾರ್ದನೆ ಹೊಳೆಯು ವಕ್ರ ವಕ್ರವಾಗಿ ಹರಿಯುವಂತೆ ತಮ್ಮ ಮಾರ್ಗವನ್ನು ವಕ್ರ ಮಾಡಿಕೊಂಡಿದ್ದಾರೆ. ಮನುಷ್ಯನ ಮಾರ್ಗಗಳೆಲ್ಲವೂ ವಕ್ರವಾಗಿದೆ. ದೇವರ ದೃಷ್ಟಿಯಲ್ಲಿ ಯಾರು ನೆಟ್ಟಗೆ ನಡೆಯುವವರಲ್ಲ. ಜ್ಞಾನೋಕ್ತಿ 14:12. ಮನುಷ್ಯನ ದೃಷ್ಟಿಗೆ ಸರಳವಾಗಿ ತೋರುವ ಒಂದು ಮಾರ್ಗವೆಂದರೆ ಕಟ್ಟಕಡೆಗೆ ಮರಣವೇ. ಮನುಷ್ಯರು ಹೇಗೆ ನಡೆದರೂ ಕೊನೆಗೆ ಮರಣಕ್ಕೆ ಸೇರುವನು. ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪಾತಾಳ ಪಾದದ ಕೆಳಗೆ ಇರುವ ಸ್ಥಳ. ಭೂಮಿಯಲ್ಲಿರುವ ಅತ್ಯಂತ ತಳಭಾಗ, ಅಂತಿಮವಾಗಿ ಮನುಷ್ಯನು ಹೋಗುವ ಹಾದಿ 'ಡೆಡ್ ಸೀ'. ತಗ್ಗಾದ ಸ್ಥಳದಲ್ಲಿರುವ ಸಮುದ್ರ ಇದನ್ನು ಸಮಾಧಿ ಎಂದು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಹುಟ್ಟಿದ ಪ್ರತಿ ಮನುಷ್ಯನು ಸತ್ತು ಸಮಾಧಿಯನ್ನು ಸೇರಲೇಬೇಕು. ಇದಕ್ಕಿಂತ ಕೆಳಗೆ ಯಾವ ಮನುಷ್ಯನು ಹೋಗಲು ಸಾಧ್ಯವಿಲ್ಲ. ಸಮಾಧಿಯಿಂದ ಯಾವ ಮನುಷ್ಯನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಲವಣ ಸಮುದ್ರ–ಡೆಡ್ ಸೀನಲ್ಲಿ ಪ್ರತಿ ದಿನ 6 ಮಿಲಿಯನ್ ಟನ್‌ನಷ್ಟು ನೀರು ಬಂದು ಸೇರಿದರು ಇದು ಎಂದು ಉಕ್ಕಿ ಹರಿದಿಲ್ಲ ಮತ್ತು ಇಲ್ಲಿ ಯಾವ ಮೀನುಗಳು ಸಹ ಜೀವಂತವಾಗಿರಲು ಸಾಧ್ಯವಿಲ್ಲ. ಇದರಂತೆಯೇ ಸಮಾಧಿಗೆ ಎಷ್ಟು ಜನರು ಬಂದರೂ ಸಮಾಧಿಯು ತನ್ನಲ್ಲಿ ಸೇರಿಸಿಕೊಳ್ಳುವುದಿಲ್ಲವೆಂದಾಗಲಿ ಸ್ಥಳದ ಕೊರತೆ ಇದೆ ಎಂದಾಗಲಿ ಹೇಳುವುದಿಲ್ಲವೆಂದು ನೋಡುತ್ತೇವೆ. ಮೀನು ಎಂದರೇ ಬದುಕಿರುವ ಮನುಷ್ಯನಿಗೆ ಹೋಲಿಕೆಯಾಗಿದೆ. ಎಷ್ಟೇ ಜನರು ಸತ್ತರೂ  ಅದು ತನ್ನಲ್ಲಿ ಸೇರಿಸಿಕೊಳ್ಳುತ್ತದೆ.

ಜ್ಞಾನೋಕ್ತಿ: 30: 15–16 ರಲ್ಲಿರುವಂತೆ ತೃಪ್ತಿಯಾಗದ ನಾಲ್ಕು ವಿಷಯದಲ್ಲಿ ಸಮಾಧಿಯು ಒಂದಾಗಿದೆ.

ಈಗೆ ಜೀವಂತವಾಗಿರುವ ಮನುಷ್ಯನು ಸಮಾಧಿಯನ್ನು ಸೇರಲಾರನೂ ಅಂತೆಯೇ ಅಲ್ಲಿ ಮೀನುಗಳೂ ಜೀವಿಸಲು ಸಾಧ್ಯವಿಲ್ಲ. ಮತ್ತು ಎಲ್ಲ ಮನುಷ್ಯರು ಸತ್ತ ನಂತರ ಸಮಾಧಿಯನ್ನು ಸೇರುವರು ಎಂಬುದನ್ನು ಸುಂದರವಾಗಿ ತಿಳಿಸಿಕೊಟ್ಟಿದ್ದಾರೆ. ಇದೇ ದೇವರು ಯೊರ್ದಾನ್ ನದಿಯಲ್ಲಿ ನಮಗಿಟ್ಟಿರುವ ಪಾಠ. ಹೀಗೆ ಒಬ್ಬನು ಪಾಪ ಮಾಡಿ ದೇವರಿಂದ ದೂರಾಗಿ ಅಂತ್ಯದಲ್ಲಿ ಮರಣಕ್ಕೆ ಹೋಗುತ್ತಾನೆ ಎಂಬುದನ್ನು ನಾವು ಇದರಿಂದ ತಿಳಿದುಕೊಳ್ಳಬಹುದು.

ಹಾಗಾದರೆ ಸಹೋದರರೇ ದೇವರು ಮರಣ ಹಾಗೂ ಪಾಪದಲ್ಲಿ ಬಿದ್ದಿರುವ ಮನು ಕುಲವನ್ನು ಹಾಗೆಯೇ ಬಿಟ್ಟುಬಿಡುತ್ತಾರೆಯೇ? ಇವರಿಗೆ ಯಾವ ವಿಮೋಚನೆಯ ಯೋಜನೆಯನ್ನು ಇಟ್ಟಿಲ್ಲವೇ? ಖಂಡಿತವಾಗಿಯೂ ದೇವರು ಮರಣದಲ್ಲಿ ಬಿದ್ದಿರುವ ಮನುಷ್ಯನಿಗೆ ವಿಮೋಚನೆಯ ನಿರೀಕ್ಷೆಯನ್ನು ಕೊಟ್ಟು ಒಂದು ಸುಂದರವಾದ ಯೋಜನೆಯನ್ನು ರೂಪಿಸಿದ್ದಾರೆ. ಇದನ್ನು ನಾವು ಯೆಹೆಜ್ಕೇಲ 47:8 ರಲ್ಲಿ ನೋಡುತ್ತದೆ.

ಡೆಡ್ ಸಿ ಎಂದರೆ ಲೋಕದ ಎಲ್ಲಾ ಮನುಷ್ಯರು ಮರಣದ ಸ್ಥಿತಿಯಲ್ಲಿ ಇರುವುದನ್ನು ಸೂಚಿಸುತ್ತದೆ ಮತ್ತು ಮರಣದಲ್ಲಿ ಇರುವವರನ್ನು ಜೀವಕ್ಕೆ ತರುವುದಾಗಿ ದೇವರು ಇಲ್ಲಿ ಸೂಚಿಸಿರುವುದನ್ನು ನೋಡುತ್ತೇವೆ.

ಯೆಹೆಜ್ಕೆಲ 47:1 ಈ ವಲಣ ಸಮುದ್ರಕ್ಕೆ ಹರಿದುಬಂದ ನೀರು ಎಲ್ಲಿಂದ ಪ್ರಾರಂಭವಾಯಿತೆಂದರೆ ದೇವಸ್ಥಾನದ ಹೊಸ್ತಲಿನ ಕೆಳಗಿನಿಂದ ಹರಿದುಬಂತು ಎಂಬುದಾಗಿ ಓದುತ್ತೇವೆ. ಈ ದೇವರ ಆಲಯದಿಂದ ಹರಿದು ಬಂದ ನೀರನ್ನು ಯೆಹೆಜ್ಕೆಲನಿಗೆ ದರ್ಶನವನ್ನು ತೋರಿಸಿದ ಮನುಷ್ಯನು 3ನೇ ವಚನದಲ್ಲಿ ಓದುವಂತೆ ಹಗ್ಗವನ್ನು ಹಿಡುದು 1000 ಮೊಳೆ ಅಳತೆ ಮಾಡಿದಾಗ ಪ್ರವಾಹದಂತೆ ಹರಿಯುತ್ತಿದ್ದ ನೀರು ಹೆಜ್ಜೆ ಮುಳುಗುವಂತಿತ್ತು. ಪುನಃ 1,000 ಮೊಳೆ ಅಳೆದಾಗ ಮೊಳಕಾಲಿನವರೆಗೂ ಇತ್ತು ಮತ್ತು ಪುನಃ 1,000 ಮೊಳೆ ಅಳೆದಾಗ ಸೊಂಟದವರೆಗೂ ಬಂತು ಮತ್ತು 1000 ಮೊಳೆ ಅಳೆದಾಗ ಅದು ದಾಟಲಾರದ ತೊರೆಯಾಗಿತ್ತು ಎಂದು ಓದುತ್ತೇವೆ. ಇಲ್ಲಿ ಆ ನದಿಯು ಅಂತ ಅಂತವಾಗಿ ತುಂಬುತ್ತಿರುವುದನ್ನು ಗಮನಿಸುತ್ತೇವೆ. ಇದು ಕೊನೆಗೆ ಲವಣ ಸಮುದ್ರವನ್ನು ಸೇರಿತು ಎಂದು ಓದುತ್ತೇವೆ. ಹಾಗೆಯೇ ಯೆಹೆಜ್ಕೇಲ 47:7 ರಲ್ಲಿ ಓದುವಂತೆ ತೊರೆಯು ಎರಡು ಕಡೆಯ ದಡದಲ್ಲಿ ಅನೇಕ ವೃಕ್ಷಗಳು ಇದ್ದವು. ಇವು ಎಂತಹ ವೃಕ್ಷಗಳೆಂದರೆ 12ನೇ ವಚನದಲ್ಲಿ ಓದುವಂತೆ ಅವುಗಳ ಎಲೆ ಬಾಡವು ಹಣ್ಣು ತೀರದು ತಿಂಗಳೂ ತಿಂಗಳೂ ಹೊಸ ಫಲಗಳ್ನು ಕೊಡುತ್ತಿದ್ದವು. 47:9ನೇ ವಚನದಲ್ಲಿ ಈ ತೊರೆಯು ಎಲ್ಲೆಲ್ಲಿ ಹರಿಯಿತೊ ಅಲ್ಲೆಲ್ಲಾ ಜಲ ಜಂತುಗಳು ಜೀವ ಹೊಂದಿದವು. 47:10 ರಲ್ಲಿ ಓದುವಂತೆ ಮೀನುಗಳು ತಂಡೋಪತಂಡವಾಗಿ ಜೀವಿಸುತ್ತಿದ್ದವು ಎಂದು ನೋಡುತ್ತೇವೆ. ದೇವರ ಆಲಯದ ನೀರು ಈ ಸಮುದ್ರಕ್ಕೆ ಬೀಳಲು ಅಲ್ಲಿ ಜೀವ ಉಂಟಾಗುವುದು. ತೀರದಲ್ಲಿ ಬೆಸ್ತರು ಮೀನು ಹಿಡಿಯುವರು ಮತ್ತು ಎನ್‌ಗೆದೆಯಿಂದ ಎನ್‌ಎಗ್ಲಿಯೆಮಿನವರೆಗೆ ಬಲ ಹಾಸುವ ಸ್ಥಳವಾಗುವುದು.

ಇದೇ ರೀತಿಯಾದ ವಾಕ್ಯ ಭಾಗವನ್ನು ಪ್ರಕಟನೆ 22:1–2 ರಲ್ಲಿ ನೋಡುತ್ತೇವೆ. ಜೀವಕರ ಜಲ ಇತ್ತು ಜೀವ ವೃಕ್ತ ಇತ್ತು ಇದು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು. ನದಿಯ ಉಭಯ ಪಾರ್ಶ್ವದಲ್ಲಿ ಜೀವ ವೃಕ್ಷ ಇತ್ತು.

ಯೆಹೆಜ್ಕೆಲ 47ನೇ ಅಧ್ಯಯ ಮತ್ತು ಪ್ರಕಟನೇ 22 ನೇ ಅಧ್ಯಯವು ಸಮನಾಂತರ ಅಧ್ಯಯಗಳು. ನೀರು ಯೆಹೆಜ್ಕೆಲನ ಗ್ರಂಥದಲ್ಲಿ ದೇವಾಲಯದಿಂದ ಹರಿಯಿತು ಎಂಬುದಾಗಿ ಓದುತ್ತೇವೆ ಮತ್ತು ಪ್ರಕಟಣೆಯಲ್ಲಿ ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹರಿಯಿತು ಎಂಬುದಾಗಿ ಓದುತ್ತೇವೆ. ಇಲ್ಲಿ ಯಜ್ಞದ ಕುರಿಯಾದಾತನ ಸಿಂಹಾಸನವು ದೇವಾಲಯದಲ್ಲಿ ಇತ್ತು ಎಂಬುದಾಗಿ ಅರ್ಥಮಾಡಿಕೊಳ್ಳಬೇಕು. ಈ ಎರಡು ಪುಸ್ತಕಗಳು ಒಂದೇ ವಿಷಯವನ್ನು ಕುರಿತು ಹೇಳುತ್ತದೆ ಎಂಬುದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

ಜೀವ ಜಲ ಎಂದರೇನು? ಎಂದು ಮೊದಲು ತಿಳಿದುಕೊಳ್ಳೋಣ.

ಹಬಕ್ಕೂಕ್ :2:14 ಸಮುದ್ರದಲ್ಲಿ ನೀರು ಹೇಗೋ ಹಾಗೆ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವುದು. 'ನೀರು' ಎಂದರೆ 'ಸತ್ಯವು ದೇವರ ಆಲಯ ಎಂದರೆ ನಾವೇ ದೇವರ ಆಲಯ ಎಂಬುದಾಗಿ ಸತ್ಯವೇದದಲ್ಲಿ ತಿಳಿಸಿರುವಂತೆ ದೇವರ ಸತ್ಯ ಜ್ಞಾನವು ಸಭೆಯ ಮುಖಾಂತರ ಇಡೀ ಲೋಕಕ್ಕೆ ಹಂತ ಹಂತವಾಗಿ ತಲುಪುವುದು.

ಯೊಹಾನ 4:14 ಅವನಲ್ಲಿ ಉಕ್ಕುವ ಒರತೆಯಾಗುವುದು. ದೇವರಲ್ಲಿ ವಿಶ್ವಾಸವಿಟ್ಟು ಸತ್ಯವನ್ನು ತಿಳಿದುಕೊಂಡಿದ್ದರು. ಅಂದರೆ ಕ್ರಿಸ್ತನಲ್ಲಿ ಸತ್ಯವನ್ನು ಕಲಿತುಕೊಂಡಿದ್ದಾರೋ ಅಂತಹವರಿಗೆ ಎಂದಿಗೂ ನೀರಡಿಕೆಯಾಗದು ಮತ್ತು ಇವರು ತಾನೆ ಇತರರಿಗೆ ಜೀವವನ್ನು ಉಂಟು ಮಾಡುವ ಸಾಧನಗಳಾಗಿರುತ್ತಾರೆ.

ಯೆಹಾನ 7:38

ಸಭೆಯು ಕ್ರಿಸ್ತನೊಂದಿಗೆ ಸೇರಿದ ಮೇಲೆ ಒರತೆಯಾಗಿದ್ದು ಸಭೆಯು ಹರಿಯುವ ಪ್ರವಾಹದಂತೆ ದೊಡ್ಡ ನದಿಯಾಗಿ ಹರಿಯುವುದು, ಅಂದರೆ ಸತ್ಯವನ್ನು ಪರಿಪೂರ್ಣವಾದ ಪ್ರಮಾಣದಲ್ಲಿ ಕ್ರಿಸ್ತನು ಮತ್ತು ಸಭೆಯು ಲೋಕದಲ್ಲಿ ತುಂಬಿಸುವರು ಎಂದು ಅರ್ಥಮಾಡಿಕೊಳ್ಳಬಹುದು. ಈ ನೀರು ಹಂತ ಹಂತವಾಗಿ ಹರಿದು ಬರುವುದನ್ನು ನೋಡುತ್ತೇವೆ. ಅಂತೆಯೇ ಸತ್ಯವು ಲೋಕದಲ್ಲಿ ಹಂತ ಹಂತವಾಗಿ ತುಂಬುವುದು.

ಯೆಶಾಯ 57:20 ಹೀಗೆ ಜಲವು ಹರಿದು ಬಂದು ಸಮುದ್ರವನ್ನು ಸೇರಲು ನೀರು ಸಿಹಿಯಾಯಿತೂ ಅಂತೆಯೇ ದುಷ್ಟ ಜನಾಂಗಕ್ಕೆ ದೇವರು ಸತ್ಯವನ್ನು ಕೊಟ್ಟಾಗ ಇಡೀ ಲೋಕಕ್ಕೆ ಸತ್ಯ ಹಂತ ಹಂತವಾಗಿ ತಲುಪಿದವು. ಯೇಸು ಸ್ವಾಮಿ ಈ ವಿಷಯವನ್ನು ಯೋಹಾನ 5:28, 29 ರಲ್ಲಿ ತಿಳಿಸಿದ್ದಾರೆ. ಸಮಾಧಿಯಲ್ಲಿರುವವರೆಲ್ಲಾ ಸತ್ಯವನ್ನು ಕೇಳಿ ಜೀವಕ್ಕೆ ಬರುವರೆಂದು ತಿಳಿಸುತ್ತದೆ 1 ಕೊರಿಂಥ 15: 22,21 ಹೇಗೆ ಆದಾಮನ ಸಂಬಂಧದಿಂದ ಸಾಯುವವರಾದರೂ ಅದೇ ಪ್ರಕಾರ ಕ್ರಿಸ್ತನಲ್ಲಿ ಜೀವಿಸುವರು; ವಿವಿಧ ಜಾತಿ, ಪಂಗಡ, ಬೇರೆ ಬೇರೆ ವಿಶ್ವಾಸದಲ್ಲಿರುವ ದೇವರನ್ನು ನಂಬದ ಜನರೂ ಸಹ ಕ್ರಿಸ್ತನ ಮುಖಾಂತರ ಎಲ್ಲರೂ ಜೀವಿಸುವರು. ಇದು ಇನ್ನು ನೆರವೇರಿಲ್ಲ ಮುಂದೆ ಬಂದು ಕಾಲದಲ್ಲಿ ಈ ವಿಷಯಗಳು ನೆರವೇರುವುದು ಎಂದು ಸತ್ಯವೇದದಲ್ಲಿ ಇದೆ. 1 ಕೊರಿಂಥ 15:21 ವಚನದಲ್ಲಿ ಸತ್ತವರು ಪುನರುತ್ಥಾನ ಹೊಂದುವರು ಎಂಬುದಾಗಿ ಓದುತ್ತೇವೆ ಮತ್ತು ಮೀನುಗಳು ಹೇಗೆ ಜೀವವನ್ನು ಪಡೆದುಕೊಂಡವೂ ಅಂತೆಯೇ ಮನುಷ್ಯರು ನಿತ್ಯ ಜೀವವನ್ನು ಹೊಂದುವರು.

ನದಿಯ ಎರಡು ದಡಗಳಲ್ಲಿ ವೃಕ್ಷಗಳಿದ್ದವು: ಮರ ಎಂದರೇ ಸತ್ಯ ವೇದದಲ್ಲಿ ನೀತಿವಂತರಿಗೆ ಹೋಲಿಸಿದ್ದಾರೆ.

ಕೀರ್ತನೆ: 1:1–3 ನೀತಿವಂತರು ನೀರಿನ ಕಾಲುವೆಯ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವರು ಮತ್ತು ಇಂತವರು ಪವಿತ್ರಾತ್ಮನಿಂದುಂಟಾದ ಫಲಗಳನ್ನು ಕೊಡುವವರಾಗಿರುವರು. ಇಂತಹ ನೀತಿವಂತರು ದುಷ್ಟರ ಆಲೋಚನೆಯಂತೆ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೇ ಧರ್ಮನಿಂದಕರೊಡನೆ ಕೂತುಕೊಳ್ಳದೆ ಸದಾ

ಕಾಲವು ದೇವರ ವಾಕ್ಯದ ಧ್ಯಾನದಲ್ಲಿ ನಿರತರಾಗಿರುವವರ ಜೀವಿತವು ಇತರರಿಗೆ ಔಷಧಿಯಾಪಾದಿಯಲ್ಲಿ ಉಪಯುಕ್ತವಾಗುವಂತೆ ಮಾಡುತ್ತಾರೆ. ಹೇಗೆ ಮರದ ಎಲೆಗಳು ಬಾಡದೆ ಅದರ ಎಲೆಗಳು ಔಷಧಿಯಾಗಿ ಉಪಯೋಗಿಸಲ್ಪಡುತ್ತದೋ ಅಂತೆಯೇ ಇವರ ಜೀವಿತವು ಇತರರಿಗೆ ಮಾದರಿಯಾಗಿ ಇರುತ್ತದೆ.

ಉದಾ: ನಮಗೆ ಆತ್ಮಿಕ ಕಾಯಿಲೆಗಳು ಬಂದಾಗ ಆತ್ಮಿಕ ಔಷಧಿಗಳನ್ನು ಅಂದರೆ ವಾಕ್ಯಗಳನ್ನು ತೆಗೆದುಕೊಳ್ಳಬೇಕೆ. ಉದಾ: ನಮ್ಮಲ್ಲಿ ದೇವರ ಕುರಿತು ಅಪನಂಬಿಕೆ ಉಂಟಾದಾಗ, ದಾವೀದನೆಂಬ ಔಷಧಿ ತೆಗೆದುಕೊಳ್ಳಬೇಕು. (ದಿನಕ್ಕೆ 7 ಸಾರಿ ಪ್ರಾರ್ಥಿಸುತ್ತಿದ್ದುದ್ದನ್ನು ನೆನಸಿಕೊಳ್ಳಬೇಕು. ಪ್ರಾರ್ಥನೆ ಮಾಡುವ ಮನಸ್ಸಿಲ್ಲದಿರುವಾಗ ದಾನಿಯೇಲನೆಂಬುವ ನಂಬಿಕೆ ಮತ್ತು ಪ್ರಾರ್ಥನೆಯ ಔಷಧವನ್ನು ತೆಗೆದುಕೊಳ್ಳಬೇಕು. (ದಿನಕ್ಕೆ 3 ಸಾರಿ ಪ್ರಾರ್ಥಿಸುತ್ತಿದ್ದನು.) ನಾವು ಎಲ್ಲವನ್ನು ಕಳೆದುಕೊಂಡಾಗ ಯೋಬನನ್ನು ನೆನಪಿಗೆ ತಂದುಕೊಳ್ಳಿರಿ.

ಇವರಂತೆಯೇ ಮುಂದೆ ನಮ್ಮ ಜೀವನವು ಸಹ ಇತರರಿಗೆ (ಲೋಕದವರಿಗೆ) ಔಷಧಿಯಾಗುತ್ತದೆ. ಹೊಸ ಹೊಸ ಫಲಗಳೆಂದರೆ ಸಭೆಯ ಮುಖಾಂತರ ಆ ಸಾವಿರ ವರ್ಷದಲ್ಲಿ ಲೋಕದವರಿಗೆ ಕಲಿಯಲು ದೊರೆಯುವ ಹೊಸ ಹೊಸ ಗುಣಗಳ ಮಾದರಿಗಳೂ ಎಂಬುದಾಗಿ ನೊಡುತ್ತೇವೆ ಮತ್ತು ಅಲ್ಲಿ ಅಲ್ಲಿ ಬೆಸ್ತರುಗಳಿದ್ದರು ಎಂಬುದಾಗಿ ವಾಕ್ಯಭಾಗದಲ್ಲಿ ಓದುತ್ತೇವೆ. ಹಾಗಾದರೆ ಆ ಸಾವಿರ ವರ್ಷದಲ್ಲಿ ಬೆಸ್ತರುಗಳಾಗಿ ಲೋಕದಲ್ಲಿ ಇರುವವರು ಯಾರು? ಆ ಸಾವಿರ ವರ್ಷದಲ್ಲಿ ಭೂಲೋಕದಲ್ಲಿ ಬೆಸ್ತರಾಗಿ ಹೆಬೇಲನಿಂದ ಸ್ನಾನಿಕನಾದ ಯೋಹಾನನವರೆಗೆ ಇರುವ ಎಲ್ಲಾ ಪಿತೃಗಳೂ ಭೂಲೋಕದಲ್ಲಿ ರಾಜರಂತೆಯೂ ಪ್ರಧಾನ ಮಂತ್ರಿಗಳಂತೆಯೂ ಆಳ್ವಿಕೆ ಮಾಡುವರು. ಇವರು ಜನರಿಗೆ ದೇವರ ಸತ್ಯವನ್ನು ತಿಳಿಸಿ ಜನರನ್ನು ಸತ್ಯಮಾರ್ಗದಲ್ಲಿ ನಡೆಸುವರು.

ಕೊನೆಯದಾಗಿ ಯೆಹೆಜ್ಕೇಲ 47:11 ರಲ್ಲಿ ಹೇಳುವಂತೆ ಸಮುದ್ರದ ಮೂಲೆಯಲ್ಲಿರುವ ನೀರು ಉಪ್ಪಾಗಿ ಇರುವಂತೆ, ಆ ಸಾವಿರ ವರ್ಷದಲ್ಲಿಯೂ ಕೆಲವರೂ ಅನ್ಯಾಯವನ್ನು ಆಚರಿಸಿ ಎರಡನೆಯ ಮರಣವನ್ನು ಹೊಂದುವರು. ಇವರು ಸತ್ಯವು ಲೋಕದಲ್ಲಿ ತುಂಬಿದ್ದರೂ ಸಹ ಇವರು ಸೈತಾನನ ಪಾಪದ ಪ್ರಭಾವವು ಇಲ್ಲದಿರುವ ಸ್ಥಿತಿಯಲ್ಲಿಯೂ ಸಹ ಅನ್ಯಾಯದ ಮಾರ್ಗವನ್ನು ಆಚರಿಸುವವರಾಗಿರುತ್ತಾರೆ. ಇಂತಹವರು ಎರಡನೇ ಮರಣದಲ್ಲಿ ನಾಶವಾಗಿ ಹೋಗುವರು. ಇದನ್ನೇ ನಾವು ಯೆಶಾಯ 26: 9, 10 ನೇ ವಚನದಲ್ಲಿ ಓದುತ್ತೇವೆ. ಇವರು ಮೂರನೇ ಲೋಕವಾದ ನೀತಿಯ ರಾಜ್ಯದಲ್ಲಿ ಅನ್ಯಾಯವನ್ನು ಆಚರಿಸುವರು ಮತ್ತು ಅಂತ್ಯದಲ್ಲಿ ನಾಶವಾಗಿ ಹೋಗುವರು ಎಂಬುದನ್ನು ತಿಳಿದುಕೊಳ್ಳುತ್ತೇವೆ. ಈಗೆ ದೇವರು ಯೊರ್ದನ್ ನದಿಯಲ್ಲಿ ಹೇಗೆ ಮನುಷ್ಯನು ಪರಿಪೂರ್ಣ ಸ್ಥಿತಿಯಿಂದ ಪಾಪ ಮಾಡಿ ದೇವರಿಂದ ದೂರವಾಗಿ ಪಾಪದ ಸಂಬಳವಾದ ಮರಣವನ್ನು ಅನುಭವಿಸಿ ದೇವರ ಕೃಪೆಯಿಂದ ಕ್ರಿಸ್ತನಲ್ಲಿ ಪುನರುತ್ಥಾನವನ್ನು ಹೊಂದಿ ನೀತಿವಂತನಾಗಿ ನಡೆದು ನಿತ್ಯ ಜೀವವನ್ನು ಹೊಂದುವನು ಎಂಬ ಪಾಠವನ್ನು ದೇವರು ನಮಗೆ ತಿಳಿಸಿಕೊಟ್ಟಿದ್ದಾರೆ.

************